# ಸಂವಿಧಾನಕ್ಕೆ ಮೋಸ
# ಕಾಶ್ಮೀರಕ್ಕೆ ವಿಶ್ವಾಸಘಾತ



- ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೊಟ್ಟಿದ್ದೇಕೆ?
- ಮಹಾರಾಜನಿಗೆ ಬೆಂಬಲ ಕೊಟ್ಟಿದ್ದ ಶಕ್ತಿಗಳು ಯಾವವು?
- ವಿಧಿ 370 ಮತ್ತು 35ಎ ರಲ್ಲಿ ಏನಿದೆ, ಅದು ಬಂದದ್ದು ಯಾವಾಗ?
- ವಿಶೇಷ ಅಂಶಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾತ್ರವೇ ಇವೆಯೇ?
- ಜಮ್ಮು ಮತ್ತು ಕಾಶ್ಮೀರದಲ್ಲಿ "ವಿಶೇಷ ಸ್ಥಾನಮಾನ"ವನ್ನು ಜಾರಿಗೊಳಿಸಿದ್ದು ಹೇಗೆ?
- 370ನೇ ವಿಧಿ ಭಾರತದೊಂದಿಗೆ ಜಮ್ಮು ಮತ್ತು ಕಾಶ್ಮೀರದ ಸಮಗ್ರೀಕರಣವನ್ನು ತಡೆದಿದೆಯೇ?
- ಭಯೋತ್ಪಾದನೆಗೆ ಮತ್ತು ಕಾಶ್ಮೀರಿ ಪಂಡಿತ ಸಮುದಾಯದ ಸಂಕಟಗಳಿಗೆ ವಿಧಿ 370 ಕಾರಣವೇ?
- ವಿಧಿ 370 ಕಾಶ್ಮೀರದ ಅಭಿವೃದ್ಧಿಯನ್ನು ತಡೆದಿದೆಯೇ?

ಸಿಪಿಐ(ಎಂ)
ಪ್ರಕಟಣೆ

# ಸಂವಿಧಾನಕ್ಕೆ ಮೋಸ
# ಕಾಶ್ಮೀರಕ್ಕೆ ವಿಶ್ವಾಸಘಾತ

ಸಿಪಿಐ(ಎಂ) ಕೇಂದ್ರ ಸಮಿತಿ ಪ್ರಕಟಿಸಿರುವ
Fraud on Constitution
Kashmir Betrayed'
ಅನುವಾದ

ಪ್ರಕಟಣೆ
**ಸಿಪಿಐ(ಎಂ)**
ಕರ್ನಾಟಕ ರಾಜ್ಯ ಸಮಿತಿ, ಬೆಂಗಳೂರು

- ಪ್ರಸ್ತಾವನೆ 3
- ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೊಟ್ಟಿದ್ದೇಕೆ? 6
- ಮಹಾರಾಜನಿಗೆ ಬೆಂಬಲ ಕೊಟ್ಟಿದ್ದ ಶಕ್ತಿಗಳು ಯಾವವು? 9
- ವಿಧಿ 370 ಮತ್ತು 35ಎ ರಲ್ಲಿ ಏನಿದೆ, ಅದು ಬಂದದ್ದು ಯಾವಾಗ? 11
- ವಿಶೇಷ ಅಂಶಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾತ್ರವೇ ಇವೆಯೇ? 13
- ಜಮ್ಮು ಮತ್ತು ಕಾಶ್ಮೀರದಲ್ಲಿ "ವಿಶೇಷ ಸ್ಥಾನಮಾನ"ವನ್ನು ಜಾರಿಗೊಳಿಸಿದ್ದು ಹೇಗೆ? 15
- 370ನೇ ವಿಧಿ ಭಾರತದೊಂದಿಗೆ ಜಮ್ಮು ಮತ್ತು ಕಾಶ್ಮೀರದ ಸಮಗ್ರೀಕರಣವನ್ನು ತಡೆದಿದೆಯೇ? 17
- ಭಯೋತ್ಪಾದನೆಗೆ ಮತ್ತು ಕಾಶ್ಮೀರಿ ಪಂಡಿತ ಸಮುದಾಯದ ಸಂಕಟಗಳಿಗೆ ವಿಧಿ 370 ಕಾರಣವೇ? 19
- ವಿಧಿ 370 ಕಾಶ್ಮೀರದ ಅಭಿವೃದ್ಧಿಯನ್ನು ತಡೆದಿದೆಯೇ? 21
- ಉಪಸಂಹಾರ 23

# ಪ್ರಸ್ತಾವನೆ



ಕೃಪೆ: ನವತೆಲಂಗಾಣ

ಆಗಸ್ಟ್ 5, 2019ರಂದು ಮೋದಿ ಸರಕಾರ ಸಂವಿಧಾನ, ಪ್ರಜಾಪ್ರಭುತ್ವ, ಒಕ್ಕೂಟ ತತ್ವ ಮತ್ತು ಜಾತ್ಯತೀತತೆಯ ನೀತಿಗಳ ವಿರುದ್ಧ ಒಂದು ಮಿಂಚಿನ ಪ್ರಹಾರ ನಡೆಸಿತು. ಒಂದು ರಾಷ್ಟ್ರಪತಿ ಆದೇಶದ ಮೂಲಕ, ಠರಾವುಗಳ ಮೂಲಕ ಮತ್ತು ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಕಾಯ್ದೆಯ ಮೂಲಕ ಅದು 370ನೇ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಮತ್ತು ಅದರಿಂದ ಹೊಮ್ಮಿದ್ದ ಉಪ ಅಂಶವಾದ 35ಎ ನ್ನು ರದ್ದುಗೊಳಿಸಿತು.

ರಾಜ್ಯವಾಗಿರುವ ಜಮ್ಮು ಮತ್ತು ಕಾಶ್ಮೀರದ ಹಕ್ಕನ್ನು ಕಸಿದುಕೊಳ್ಳಲಾಗಿದೆ, ಅದನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಲಾಗಿದೆ–ಒಂದು, ವಿಧಾನ ಸಭೆ ಇರುವ ಜಮ್ಮು ಮತ್ತು ಕಾಶ್ಮೀರ, ಮತ್ತು ಎರಡು, ವಿಧಾನಸಭೆ ಇರದ, ಕಾರ್ಗಿಲ್ ನ್ನೂ ಒಳಗೊಂಡ ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವಾಗಿ ಲಡಾಖ್. ಇವೆರಡೂ ಈಗ ಕೇಂದ್ರ ಸರಕಾರದ ನೇರ ಅಧಿಕಾರಕ್ಕೆ ಒಳಪಟ್ಟಿವೆ. ಹೀಗೆ, ಮೋದಿ ಸರಕಾರದ ಕೃಪೆಯಿಂದ ಭಾರತದ ರಾಜ್ಯಗಳ ಸಂಖ್ಯೆ 29ರಿಂದ 28ಕ್ಕೆ ಇಳಿದಿದೆ.

ಸಿಪಿಐ(ಎಂ) ಈ ಅಭೂತಪೂರ್ವ ಶಾಸನಗಳನ್ನು ಮತ್ತು ಕ್ರಮಗಳನ್ನು ಬಲವಾಗಿ ಖಂಡಿಸಿದೆ. ಇವು ಅಸಂವಿಧಾನಿಕ, ಕಾನೂನುಬಾಹಿರ ಮತ್ತು ಸರ್ವಾಧಿಕಾರಶಾಹಿ ಕ್ರಮಗಳು. ಅವು ವಿವಿಧತೆಯಲ್ಲಿ ಏಕತೆಯ ನೀತಿಯ ಮಾಡಿರುವ ದಾಳಿ. ಇದು 370ನೇ ವಿಧಿಯ ಅಡಿಯಲ್ಲಿ ವಿಶೇಷ ಸ್ಥಾನಮಾನದ ರದ್ದತಿಯಷ್ಟೇ ಅಲ್ಲ, ಪ್ರಜಾಪ್ರಭುತ್ವವನ್ನೇ ರದ್ದುಗೊಳಿಸಿದಂತಾಗಿದೆ.

ಇದುವರೆಗೆ ಯಾವುದೇ ಒಂದು ರಾಜ್ಯದ ಹಕ್ಕುಗಳ ಅಥವ ಗಡಿಗಳ ಬದಲಾವಣೆಯ ಪ್ರಶ್ನೆ ಬಂದರೆ ಅದರ ಮೇಲೆ ದೀರ್ಘಕಾಲದ ಚರ್ಚೆ ನಡೆಯುತ್ತಿತ್ತು. ಆಂಧ್ರಪ್ರದೇಶ, ಬಿಹಾರ, ಉತ್ತರಪ್ರದೇಶ ಮತ್ತು ಮಧ್ಯಪ್ರದೇಶ ರಾಜ್ಯಗಳ ವಿಭಜನೆಗಳ ವಿಷಯವನ್ನು ತಗೊಳ್ಳಿ. ಚರ್ಚೆಗಳು ವರ್ಷಾನುಗಟ್ಟಲೆ ನಡೆದವು, ರಾಜ್ಯ ಶಾಸಕಾಂಗಗಳ ಅಭಿಪ್ರಾಯಗಳನ್ನು ಗಮನಕ್ಕೆ ತಗೊಂಡ ಮೇಲೆಯೇ ಆ ರಾಜ್ಯಗಳ ವಿಭಜನೆ ನಡೆಯಿತು. ಭಾರತದ ಸಂವಿಧಾನದ ಕಲಮು 3 ಇದನ್ನು ವಿಧಿಸಿದೆ. ಆದರೆ ಮೋದಿ ಸರಕಾರ ಈ ವಿಧಿಯನ್ನು ಜಮ್ಮು ಮತ್ತು ಕಾಶ್ಮೀರದ ವಿಷಯದಲ್ಲಿ ನಾಚಿಕೆಯಿಲ್ಲದೆ ಉಲ್ಲಂಘಿಸಿದೆ.

ಹೀಗೆ ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊತ್ತಮೊದಲ ಬಾರಿಗೆ ಒಂದು ರಾಜ್ಯದ ಜನತೆಯ ಭವಿಷ್ಯವನ್ನು ಅವರ ಅಭಿಪ್ರಾಯವನ್ನು ಗಮನಕ್ಕೆ ತಗೊಳ್ಳದೆ ಅಥವ ತಮ್ಮದೇ ಭವಿಷ್ಯದ ಬಗ್ಗೆ ಅಭಿಪ್ರಾಯ ಮಂಡಿಸಲು, ಚರ್ಚಿಸಲು ಅವರಿಗೆ ಅವಕಾಶವನ್ನೂ ಕೊಡದೆ ನಿರ್ಧರಿಸಲಾಗಿದೆ. ಈ ಮೂಲಕ ಇದೊಂದು ಅಪಾಯಕಾರಿ ನಿದರ್ಶನವನ್ನು ಕಲ್ಪಿಸಿ ಕೊಡುತ್ತಿದೆ. ತಮ್ಮ ಪಾಶವೀ ಬಹುಮತವನ್ನು ಬಳಸುವ ಮೋದಿ–ಷಾ ಜೋಡಿಯ ಅಡಿಯಲ್ಲಿ ಕೇಂದ್ರ ಸರಕಾರ ರಾಜ್ಯಗಳ ಹಕ್ಕುಗಳ ಮೇಲೆ ಬೇಕಾಬಿಟ್ಟಿ ಸವಾರಿ ಮಾಡಬಹುದು. ಸಂಸತ್ತಿನಲ್ಲಿ ಅವರ ಬಹುಮತವನ್ನು ಬಳಸಿ ಈಗ ಯಾವುದೇ ರಾಜ್ಯವನ್ನು ವಿಸರ್ಜಿಸಿ ಕೇಂದ್ರ ಸರಕಾರದ ವಸಾಹತುವಾಗಿ ಮಾಡಬಹುದು. ಹೀಗೆ ಇದು ನಮ್ಮ ಸಂವಿಧಾನದ ಒಕ್ಕೂಟ ರಚನೆಯ ಮೇಲೆಯೇ ಒಂದು ಹೊಡೆತ ಕೂಡ ಆಗಿದೆ.

ಈ ಸಂದರ್ಭದಲ್ಲಿ ಸಮಾನಾಂತರವಾಗಿ ನಡೆಸಿರುವ ಚುನಾವಣಾ ಕ್ಷೇತ್ರಗಳ ಮರುವಿಂಗಡಣೆಯ ಕಸರತ್ತು ಕೂಡ ಮೋದಿ ಸರಕಾರದ ನಿಜವಾದ ಆಟದ ಯೋಜನೆ ಏನು ಎಂಬುದರತ್ತ ಬೊಟ್ಟು ಮಾಡಿ ತೋರಿಸುತ್ತಿದೆ. ಅದೆಂದರೆ ಈ ರಾಜ್ಯದ ಜನಸಂಖ್ಯಾ ಸ್ವರೂಪವನ್ನು ಬದಲಿಸುವುದು. ಮುಸ್ಲಿಮೇತರ ಪ್ರದೇಶಗಳಿಗೆ ಹೆಚ್ಚಿನ ಒತ್ತು ಕೊಡುವಂತೆ ಚುನಾವಣಾ ಕ್ಷೇತ್ರಗಳ ಮರುವಿಂಗಡಣೆ ಮೂಲಕ ಇದನ್ನು ಆರಂಭಿಸಬಹುದು. 35ಎ ವಿಭಾಗದ ಅಡಿಯಲ್ಲಿ ಇರುವ ಶಾಶ್ವತ ನಿವಾಸಿ ಎಂಬ ಸ್ಥಾನಮಾನವನ್ನು ತೆಗೆದುಹಾಕುವುದರೊಂದಿಗೆ ಇದರಲ್ಲಿ ಸುಲಭವಾಗಿ ಕೈಚಳಕ ನಡೆಸಬಹುದು.

ಕಾಶ್ಮೀರ ಕಣಿವೆಯಲ್ಲದೆ ಜಮ್ಮು ಮತ್ತು ಲಡಾಖ್‌ನಲ್ಲೂ ಸಾಕಷ್ಟು ಪ್ರಮಾಣದ ಮುಸ್ಲಿಂ ಜನಸಂಖ್ಯೆ (ಅನುಕ್ರಮವಾಗಿ 33.45% ಮತ್ತು 46.4ಶೇ.) ಇದ್ದು, ಅವರೂ ಕೇಂದ್ರ ಸರಕಾರದ ಕ್ರಮಗಳಿಗೆ ತಮ್ಮ ಬಲವಾದ ವಿರೋಧವನ್ನು ವ್ಯಕ್ತಪಡಿಸಿದ್ದಾರೆ ಎಂಬುದನ್ನೂ ನೆನಪಿಟ್ಟು ಕೊಳ್ಳಬೇಕು. ಪಾಕಿಸ್ತಾನದ ಗಡಿಯಲ್ಲಿರುವ, ಪಾಕಿಸ್ತಾನದ ವಿರುದ್ಧ ಧೈರ್ಯದಿಂದ ಹೋರಾಡಿರುವ ಕಾರ್ಗಿಲ್‌ನ ಜನತೆ 370ನೇ ವಿಧಿಯ ಅಡಿಯಲ್ಲಿ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿರುವುದನ್ನು ವಿರೋಧಿಸಿದ್ದಾರೆ. ಹೀಗೆ ಇದೊಂದು ಅಪಾಯಕಾರಿ ನಡೆ, ದೂರಗಾಮೀ ದುಷ್ಪರಿಣಾಮಗಳನ್ನು ಬೀರುವಂತದ್ದು.

ಇಲ್ಲಿ ಬಳಸಿರುವ ವಿಧಾನವು ಕೂಡ ಸಂವಿಧಾನದ ಮೇಲೆ ಹಾಕಿರುವ ಹೊಡೆತವೇ ಆಗಿದೆ. ಯಾವ ಸಂವಿಧಾನದ ವಿಧಿಯನ್ನು ರದ್ದು ಮಾಡಬೇಕೆಂದಿದ್ದರೋ, ಅದೇ ವಿಧಿಯ ಅಡಿಯಲ್ಲಿ ನೀಡಿದ ಒಂದು ರಾಷ್ಟ್ರಪತಿ ಆದೇಶವನ್ನು ಇನ್ನೊಂದು ವಿಧಿ, 367ನ್ನು ಮಾರ್ಪಡಿಸಲು ಉಪಯೋಗಿಸಲಾಯಿತು. ನಂತರ ಇದನ್ನು 370ನೇ ವಿಧಿಯ ತಿರುಳನ್ನು ಅಳಿಸಿ ಹಾಕಲು ಬಳಸಲಾಯಿತು. ಜಮ್ಮು ಮತ್ತು ಕಾಶ್ಮೀರ ರಾಷ್ಟ್ರಪತಿ ಆಳ್ವಿಕೆಯ ಅಡಿಯಲ್ಲಿರುವುದರಿಂದಾಗಿ, ಈ ಹೂಟದ ಮೂಲಕ ರಾಜ್ಯ ಶಾಸಕಾಂಗದಿಂದ ಪಡೆಯಲೇ ಬೇಕಾಗಿದ್ದ ಒಪ್ಪಿಗೆಯನ್ನು ರಾಜ್ಯಪಾಲರು ಕಿತ್ತುಕೊಂಡರು. ಇದು ಸಂವಿಧಾನಕ್ಕೆ ಮಾಡಿರುವ ಮೋಸ ಮತ್ತು ಪ್ರಜಾಪ್ರಭುತ್ವದ ಕೊಲೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಇಡೀ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಬೀಗ ಜಡಿಯಲಾಯಿತು. 1 ಕೋಟಿಗೂ ಹೆಚ್ಚು ಫೋನ್ ಲೈನ್‌ಗಳನ್ನು ಕಡಿದು ಹಾಕಲಾಯಿತು, ಸಾರ್ವಜನಿಕ ಸಾರಿಗೆಯನ್ನು


ನಿಲ್ಲಿಸಲಾಯಿತು. ಇಂಟರ್ನೆಟ್ ನ್ನು ಅಮಾನತುಗೊಳಿಸಲಾಯಿತು. ಕಚೇರಿಗಳು, ಅಂಗಡಿಗಳನ್ನು ಮುಚ್ಚಲಾಯಿತು. ತುರ್ತು ಸಂದರ್ಭಗಳಲ್ಲಿ ಮಾತ್ರ ಜನಗಳು ಹೊರಗೆ ಹೋಗಬಹುದು, ಅದೂ ಸಶಸ್ತ್ರ ಪಡೆಗಳ ಕಾವಲಿರುವ ಅಡೆ-ತಡೆಗಳನ್ನು, ಮುಳ್ಳು ತಂತಿಗಳನ್ನು ಹಾದುಕೊಂಡು ಹೋಗಬೇಕು. ಪತ್ರಿಕೆಗಳು ಮತ್ತು ಕೇಬಲ್ ಟಿವಿ ಸುಮಾರಾಗಿ ಇಲ್ಲವೇ ಇಲ್ಲ. ಜಮ್ಮು ಮತ್ತು ಕಾಶ್ಮೀರವನ್ನು ಈಗ ಒಂದು ಆಕ್ರಮಿತ ಪ್ರದೇಶದಂತೆಯೇ ಕಾಣಲಾಗುತ್ತಿದೆ.

ಜಮ್ಮು ಮತ್ತು ಕಾಶ್ಮೀರದ ಇಬ್ಬರು ಮಾಜಿ ಮುಖ್ಯಮಂತ್ರಿಗಳು, ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಮತ್ತು ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಯುಸುಫ್ ತರಿಗಾಮಿ ಸೇರಿದಂತೆ ಎಲ್ಲ ಪ್ರಮುಖ ಪಕ್ಷಗಳ ಎಲ್ಲ ಮುಖಂಡರುಗಳು, ಜತೆಗೆ ಇತರ ನೂರಾರು ಮಂದಿ ಒಂದೋ ಜೈಲಿನಲ್ಲಿದ್ದಾರೆ, ಇಲ್ಲವೇ ಗೃಹಬಂಧನದಲ್ಲಿ ಇದ್ದಾರೆ. ಮೋದಿ ಸರಕಾರ ಹೇಳುತ್ತಿರುವಂತೆ, ಇವನ್ನೆಲ್ಲ ಜಮ್ಮು ಮತ್ತು ಕಾಶ್ಮೀರದ ಒಳಿತಿಗಾಗಿ ಮಾಡುತ್ತಿದ್ದರೆ, ಅವರಿಗೇಕೆ ಜನರ ಬಗ್ಗೆ ಭೀತಿ? ರಾಷ್ಟ್ರೀಯ ಸಮಗ್ರತೆಯನ್ನು ಬಂದೂಕನ್ನು ತೋರಿಸಿ ಅಥವ ಬಲವಂತದಿಂದ ಮಾಡಲು ಸಾಧ್ಯವಿಲ್ಲ. ಈ ಕ್ರಮಗಳು ಜಮ್ಮು ಮತ್ತು ಕಾಶ್ಮೀರದ ಜನತೆಗೆ ಮಾತ್ರವೇ ಅಲ್ಲ, ನಮ್ಮ ದೇಶದ ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಿಗೆ ಕೂಡ ಬಗೆದಿರುವ ವಿಶ್ವಾಸದ್ರೋಹ. ಇದಕ್ಕೆ ದೇಶ ಭಾರೀ ಬೆಲೆ ತೆರಬೇಕಾಗುತ್ತದೆ.

ಬಿಜೆಪಿ ಮತ್ತು ಅದರ ವಿವಿಧ “ಮಿತ್ರರು” ಕೆಲವು ಟೆಲಿವಿಶನ್ ವಾಹಿನಿಗಳವರೂ ಸೇರಿದಂತೆ, ಕಾಶ್ಮೀರದ ಇತಿಹಾಸ, ರಾಷ್ಟ್ರೀಯ ಆಂದೋಲನದ ನೇತಾರರು, ಕಾಶ್ಮೀರದ ಜನತೆಯ ಬಗ್ಗೆ ಬೃಹತ್ ಪ್ರಮಾಣದಲ್ಲಿ ಸುಳ್ಳು ಮಾಹಿತಿಗಳ, ಇತಿಹಾಸವನ್ನೇ ಹುಸಿಗೊಳಿಸುವ ಪ್ರಚಾರ ಆರಂಭಿಸಿದ್ದಾರೆ. ಟ್ರೋಲ್ ಪಡೆಗಳು ವಾಟ್ಸ್‌ಆಪ್ ಮತ್ತು ಇತರ ಸಾಮಾಜಿಕ ಮಾಧ್ಯಮಗಳ ವೇದಿಕೆಗಳಲ್ಲಿ, ಈ ಕರಾಳ ಕ್ರಮಗಳನ್ನು ವಿರೋಧಿಸುವ ಎಲ್ಲರ ಮೇಲೂ ವಿಷಕಾರುತ್ತಿವೆ.

ನಾವು ಈ ಮುಂದೆ ಜಮ್ಮು ಮತ್ತು ಕಾಶ್ಮೀರವು ಸಂವಿಧಾನ ಹೇಳಿರುವ ‘ಭಾರತ ಒಕ್ಕೂಟ’ಕ್ಕೆ ಸೇರ್ಪಡೆಯಾಗಲು, ವಿಶೇಷ ಸ್ಥಾನಮಾನಕ್ಕೆ ಅರ್ಹವಾಗಲು ಕಾರಣವಾದ ಚಾರಿತ್ರಿಕ ಸಂಗತಿಗಳನ್ನು, ಮತ್ತು 370ನೇ ವಿಧಿ ರೂಪಿಸಲು ಕಾರಣವಾದ ರಾಜಕೀಯ ಸಂದರ್ಭವನ್ನು ನಿರೂಪಿಸುತ್ತಿದ್ದೇವೆ.

## • ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೊಟ್ಟಿದ್ದೇಕೆ?



ಸ್ವಾತಂತ್ರ್ಯದ ವೇಳೆಯಲ್ಲಿ ಭಾರತದ ವಿಭಜನೆಯಾಗುತ್ತಿದ್ದಾಗ ಜಮ್ಮು ಮತ್ತು ಕಾಶ್ಮೀರ ಡೋಗ್ರಾ ಮಹಾರಾಜ ಹರಿ ಸಿಂಗ್ ಆಳ್ವಿಕೆಯಲ್ಲಿದ್ದ ಸಂಸ್ಥಾನವಾಗಿತ್ತು, ಅದರಲ್ಲಿ ಮೂರು ಜಿಲ್ಲಾ ಪ್ರದೇಶಗಳಿದ್ದವು, ಜಮ್ಮು, ಕಾಶ್ಮೀರ ಮತ್ತು ಲಡಾಖ್. ಧಾರ್ಮಿಕ ನಂಬಿಕೆಯ ದೃಷ್ಟಿಯಿಂದ, ಬಹುಪಾಲು ಜನರು ಮುಸ್ಲಿಮರಾಗಿದ್ದರು. ಆ ವೇಳೆಯಲ್ಲಿ ಹೆಚ್ಚಿನ ರಾಜರುಗಳ ಸಂಸ್ಥಾನಗಳು ಭಾರತಕ್ಕೆ ಸೇರ್ಪಡೆಗೊಂಡು, ಸೇರ್ಪಡೆಯ ದಸ್ತಾವೇಜಿಗೆ ಸಹಿ ಹಾಕಿ ಭಾರತೀಯ ಒಕ್ಕೂಟವನ್ನು ಸೇರಿದವು.

ಕಾಶ್ಮೀರದಲ್ಲಿನ ಪರಿಸ್ಥಿತಿ ಭಿನ್ನವಾಗಿತ್ತು.

ಇಲ್ಲಿ ಕಾಶ್ಮೀರದ ಮಹಾರಾಜ ಹರಿ ಸಿಂಗ್ ಭಾರತಕ್ಕೆ ಸೇರಲು ನಿರಾಕರಿಸಿದರು. ಆತ ಅಕ್ಟೋಬರ್ 1947ರಲ್ಲಿ, ಅಂದರೆ ಭಾರತ ಸ್ವತಂತ್ರವಾದ ಎರಡು ತಿಂಗಳ ನಂತರ ಆಗ ಭಾರತದ ಬ್ರಿಟಿಶ್ ಗವರ್ನರ್–ಜನರಲ್ ಆಗಿದ್ದ ಮೌಂಟ್‌ಬ್ಯಾಟನ್‌ಗೆ ಒಂದು ಪತ್ರ ಬರೆದರು. ಅದರಲ್ಲಿ ಹೀಗೆ ಬರೆಯಲಾಗಿತ್ತು:

> "ಮಹಾಮಹಿಮರಾದ ತಮಗೆ ತಿಳಿದಿರುವಂತೆ, ಜಮ್ಮು ಮತ್ತು ಕಾಶ್ಮೀರದ ಸಂಸ್ಥಾನ ಭಾರತ ದೇಶಕ್ಕಾಗಲೀ, ಪಾಕಿಸ್ತಾನಕ್ಕಾಗಲೀ ಸೇರ್ಪಡೆಯಾಗಿಲ್ಲ. ಭೌಗೋಳಿಕವಾಗಿ ನನ್ನ ಸಂಸ್ಥಾನ ಎರಡೂ ದೇಶಗಳಿಗೆ ಹೊಂದಿಕೊಂಡಿದೆ. ಎರಡರರೊಂದಿಗೂ ಮಹತ್ವದ ಆರ್ಥಿಕ ಮತ್ತು ಸಾಂಸ್ಕೃತಿಕ ಕೊಂಡಿಗಳನ್ನು ಹೊಂದಿದೆ. ಇದಲ್ಲದೆ ನನ್ನ ಸಂಸ್ಥಾನ ಸೋವಿಯೆತ್ ಗಣರಾಜ್ಯ ಮತ್ತು ಚೀನಾದೊಂದಿಗೆ ಒಂದು ಸಾಮಾನ್ಯ ಗಡಿ ಹೊಂದಿದೆ. ಭಾರತ ಮತ್ತು ಪಾಕಿಸ್ತಾನ ದೇಶಗಳು ತಮ್ಮ ವಿದೇಶಾಂಗ ಸಂಬಂಧಗಳಲ್ಲಿ ಇದನ್ನು ಉಪೇಕ್ಷಿಸಲು ಸಾಧ್ಯವಿಲ್ಲ.
>
> ನಾನು ಯಾವ ದೇಶಕ್ಕೆ ಸೇರ್ಪಡೆಯಾಗಬೇಕು, ಎರಡೂ ದೇಶಗಳು ಮತ್ತು ನನ್ನ ಸಂಸ್ಥಾನದ ಹಿತದೃಷ್ಟಿಯಿಂದ, ಈ ಎರಡೂ ದೇಶಗಳೊಂದಿಗೆ ಮಿತ್ರತ್ವಪೂರ್ಣ ಸಂಬಂಧಗಳೊಂದಿಗೆ, ಸ್ವತಂತ್ರವಾಗಿರುವುದು ಅತ್ಯುತ್ತಮವಲ್ಲವೇ ಎಂದು ನಿರ್ಧರಿಸಲು ನನಗೆ ಸಮಯ ಬೇಕಾಗಿತ್ತು."

ಬ್ರಿಟಿಶರು ಅವರ ಆಯಕಟ್ಟಿನ ಕಾರಣಗಳಿಗಾಗಿ, ಕಾಶ್ಮೀರದ ರಾಜಪ್ರಭುತ್ವವನ್ನು ಉಳಿಸಿಕೊಂಡು ಅದನ್ನು ಸ್ವತಂತ್ರವಾಗಿ ಇಡುವುದರಲ್ಲಿ ಆಸಕ್ತರಾಗಿದ್ದರು. ಆದರೆ ಕಾಶ್ಮೀರದ ಜನತೆಗೆ ಮಹಾರಾಜನ ಪಾಳೆಯಗಾರೀ ವ್ಯವಸ್ಥೆಯ ಕ್ರೌರ್ಯದ ಅನುಭವ ಅದಾಗಲೇ

ಆಗಿತ್ತು. ಕಾಶ್ಮೀರದಲ್ಲಿ, ಇತರ ಹೆಚ್ಚಿನ ರಾಜರುಗಳ ಸಂಸ್ಥಾನಗಳಲ್ಲಿ ಇದ್ದಂತೆ, ಸ್ವಾತಂತ್ರ್ಯ ಆಂದೋಲನ ಬ್ರಿಟಿಶರ ವಿರುದ್ಧ ಮಾತ್ರವಲ್ಲ, ಆಯಾಯ ಸಂಸ್ಥಾನಗಳ ಆಳರಸರ ವಿರುದ್ಧವೂ ಗುರಿಯಿಟ್ಟಿತ್ತು. ಅವರ ಪಾಳೆಯಗಾರೀ ಆಳ್ವಿಕೆಗಳಲ್ಲಿ ಬಹುಪಾಲು ಭೂಮಿ ಕೆಲವೇ ಕೈಗಳಲ್ಲಿ ಅಪಾರ ಪ್ರಮಾಣದಲ್ಲಿ ಕೇಂದ್ರೀಕೃತವಾಗಿದ್ದು, ರೈತರ ವಿಪರೀತ ಶೋಷಣೆಯ ಮೇಲೆ ಆಧರಿಸಿದ್ದವು.

ಮಹಾರಾಜ ಹರಿ ಸಿಂಗ್ ಸಂಸ್ಥಾನದ ಆದಾಯದ ಮೂರನೇ ಒಂದು ಭಾಗವನ್ನು ತನ್ನ "ವೈಯಕ್ತಿಕ" ವೆಚ್ಚಗಳಿಗೆ ಸ್ವಾಧೀನ ಪಡಿಸಿಕೊಳ್ಳುತ್ತಿದ್ದರು. ಅದೇ ರೀತಿಯಲ್ಲಿ, ಬಹುಪಾಲು ಭೂಮಿ ದೊಡ್ಡ ಭೂಮಾಲಕರ ಒಡೆತನದಲ್ಲಿತ್ತು. ಇದು ರೈತಾಪಿ ಜನಗಳ ಬಡತನಕ್ಕೆ ಕಾರಣವಾಗಿತ್ತು. ನ್ಯಾಶನಲ್ ಕಾನ್ಫರೆನ್ಸ್ ಮತ್ತು ಅದರ ನೇತಾರ ಶೇಖ್ ಅಬ್ದುಲ್ಲಾ ನೇತೃತ್ವದಲ್ಲಿ ಒಂದು ಬೃಹತ್ ಆಂದೋಲನ ನಡೆದಿತ್ತು. ಇದು ರಾಜಪ್ರಭುತ್ವ ಕಾಶ್ಮೀರದಿಂದ ತೊಲಗಬೇಕು ಎಂಬ ಘೋಷಣೆಯ ವರೆಗೂ ತಲುಪಿತ್ತು. ಈ ಆಂದೋಲನ ಸಂಪೂರ್ಣವಾಗಿ ಜಾತ್ಯತೀತ ನೆಲೆಯ ಮೇಲೆ, ಸೂಫಿ ಮತ್ತು ಸ್ಥಳೀಯ ಆಚರಣೆಗಳು ಹಾಗೂ ಪರಂಪರೆಗಳ ಸಂಗಮವಾಗಿದ್ದ 'ಕಶ್ಮೀರಿಯತ್'ನ ಸಂಸ್ಕೃತಿಯ ಮೇಲೆ ನಿಂತಿತ್ತು.

ಆದ್ದರಿಂದ ಬ್ರಿಟಿಶರ ಕೃಪಾಪೋಷಣೆಯಲ್ಲಿ ಸ್ವತಂತ್ರವಾಗಿ ಉಳಿಯುವ ಹರಿ ಸಿಂಗ್ ರವರ ಯೋಜನೆಯನ್ನು ಕಾಶ್ಮೀರದ ಜನತೆ ಬಲವಾಗಿ ವಿರೋಧಿಸಿದರು. ಅವರು, ಇಸ್ಲಾಮಿನ ಹೆಸರಲ್ಲಿ ಪಾಕಿಸ್ತಾನವನ್ನು ಸೇರಬೇಕೆಂಬ ಜಿನ್ನಾ ಕರೆಯನ್ನೂ ತಿರಸ್ಕರಿಸಿದರು. "ಆಲ್ ಜಮ್ಮು ಅಂಡ್ ಕಾಶ್ಮೀರ ಮುಸ್ಲಿಂ ಕಾನ್ಫರೆನ್ಸ್" ನೇತೃತ್ವದಲ್ಲಿದ್ದ ಕೆಲವು ಮಂದಿಗಳು ಮಾತ್ರವೇ ಪಾಕಿಸ್ತಾನವನ್ನು ಸೇರ ಬಯಸುತ್ತಿದ್ದರು. ನಿಜ ಸಂಗತಿಯೆಂದರೆ, ಕಾಶ್ಮೀರದಲ್ಲಿನ ಪಾಳೆಯಗಾರೀ-ವಿರೋಧಿ ಆಂದೋಲನದ ಮುಖಂಡರು ಪಾಕಿಸ್ತಾನವನ್ನು ಒಂದು ಬಹುಸಂಖ್ಯಾಕವಾದೀ ಇಸ್ಲಾಮಿಕ್ ಪ್ರಭುತ್ವವಷ್ಟೇ ಅಲ್ಲ, ಅದು ಪಾಳೆಯಗಾರಿ ಹಿತಗಳು ಪ್ರಾಬಲ್ಯ ಹೊಂದಿರುವ ಒಂದು ಪ್ರಭುತ್ವ ಎಂದೂ ಕಾಣುತ್ತಿದ್ದರು. ಪಾಳೆಯಗಾರೀ ಭೂಹಿಡುವಳಿಗಳ ನಿರ್ಮೂಲನೆ ನ್ಯಾಶನಲ್ ಕಾನ್ಫರೆನ್ಸ್ ಆಂದೋಲನದ ಪ್ರಥಮ ಗುರಿಯಾಗಿತ್ತು, ಆದರೆ ಪಾಕಿಸ್ತಾನಿ ಪ್ರಭುತ್ವ ಇದನ್ನು ಬೆಂಬಲಿಸುವುದಿಲ್ಲ ಎಂದು ಅವರಿಗೆ ಗೊತ್ತಿತ್ತು.

ಪಾಕಿಸ್ತಾನ ಕಾಶ್ಮೀರದೊಳಕ್ಕೆ ಅತಿಕ್ರಮಣ ನಡೆಸಲು ಬ್ರಿಟಿಶರ ನೆರವಿನಿಂದ ವಾಯವ್ಯ ಗಡಿ ಪ್ರಾಂತ್ಯದಿಂದ ಸಶಸ್ತ್ರ ಗುಂಪುಗಳನ್ನು ಸಂಘಟಿಸಿತು. ಈ ದಾಳಿಕೋರರು ಒಂದಾದ ಮೇಲೊಂದರಂತೆ ನುಗ್ಗಿ ಬಂದ ಪ್ರದೇಶಗಳಲ್ಲಿ ಹಿಂದೂ ಮತ್ತು ಮುಸ್ಲಿಂ ಈ ಎರಡೂ ಸಮುದಾಯಗಳ ಜನಗಳ ಮೆಲೆ ಅತ್ಯಾಚಾರಗಳನ್ನು ನಡೆಸುತ್ತ, ಲೂಟಿ ಮಾಡುತ್ತ ಶ್ರೀನಗರದ ಹೊರವಲಯದ ವರೆಗೂ ತಲುಪಿದರು. ಈ ಹಂತದಲ್ಲೇ ನ್ಯಾಶನಲ್ ಕಾನ್ಫರೆನ್ಸ್ ನ ಧೀರ ಮುಖಂಡರ ನೇತೃತ್ವದ ಜನತಾ ಸೈನಿಕ ಪಡೆಗಳನ್ನು ದಾಳಿಕೋರರನ್ನು ಎದುರಿಸಿ ಹಿಮ್ಮೆಟ್ಟಿಸಲು ಅಣಿನೆರೆಸಲಾಯಿತು. ಅವರು ಅಪಾರ ಬಲಿದಾನಗಳ ಮೂಲಕ ಶ್ರೀನಗರವನ್ನು ರಕ್ಷಿಸಿಕೊಂಡರು, ಇದರಲ್ಲಿ ನೂರಾರು ಕಾಶ್ಮೀರಿಗಳು ಪ್ರಾಣ ಕಳಕೊಂಡರು.

ಹರಿ ಸಿಂಗ್, ಆತನ ಸಂಬಂಧಿಗಳು ಮತ್ತು ಆಸ್ಥಾನಿಗರು ಜಮ್ಮುವಿಗೆ

ಪರಾರಿಯಾದರು. ಆಗಲೇ ಆತ ಮೌಂಟ್‌ಬ್ಯಾಟನ್‌ಗೆ ಭಾರತೀಯ ಸೇನೆಯ ನೆರವು ಕೋರಿ ಪತ್ರ ಬರೆದದ್ದು. ಆದರೆ ಇದು ಆತ ಭಾರತಕ್ಕೆ ಸೇರ್ಪಡೆಯಾದರೆ ಮಾತ್ರವೇ ಸಾಧ್ಯವಿತ್ತು. ಇಂತಹ ಸನ್ನಿವೇಶಗಳಲ್ಲೇ, ಜನತಾ ಪ್ರತಿರೋಧದ ಒತ್ತಡಕ್ಕೆ ಒಳಗಾಗಿ ಆತ ಸೇರ್ಪಡೆಯ ದಸ್ತಾವೇಜಿಗೆ ಅಕ್ಟೋಬರ್ 26, 1947ರಂದು ಸಹಿ ಹಾಕಿದರು. ಭಾರತೀಯ ಸೇನೆ ಶ್ರೀನಗರದಲ್ಲಿ ಬಂದಿಳಿಯಿತು, ಕಣಿವೆಯ ಜನಗಳ ಬೆಂಬಲದಿಂದ ಮತ್ತು ನೆರವಿನಿಂದ ದಾಳಿಕೋರರನ್ನು ಹೊಡೆದೋಡಿಸಿತು. ಓಡುತ್ತ ಹೋದ ಅವರು ನಿಂತದ್ದು ಉರಿ ಗಡಿಯಲ್ಲಷ್ಟೇ, ಅದೂ ಕೂಡ, ಇನ್ನೂ ಭಾರತೀಯ ಸೇನೆಯೊಳಗೆ ಒಂದು ಪಾತ್ರವನ್ನು ಹೊಂದಿದ್ದ ಬ್ರಿಟಿಶರ ಒತ್ತಡದ ಅಡಿಯಲ್ಲಿ.

ವಿಶ್ವಸಂಸ್ಥೆ ಇದರಲ್ಲಿ ತೊಡಗಿಕೊಂಡಿತು. ರಾಜ್ಯದ ಮೂರನೇ ಒಂದು ಭಾಗದ ಮೇಲೆ ಪಾಕಿಸ್ತಾನದ ಅತಿಕ್ರಮಣ ಹಾಗೆಯೇ ಉಳಿಯಿತು. .ಜನಮತಸಂಗ್ರಹದ ವಿಚಾರವನ್ನು ಸ್ವೀಕರಿಸಲಾಯಿತು. ಮತ್ತು ಕಾಶ್ಮೀರ "ವಿವಾದ" ಜನ್ಮ ತಳೆಯಿತು.

ಜನಮತಸಂಗ್ರಹ ನಡೆಯಲಿಲ್ಲ. ಏಕೆಂದರೆ, ಪಾಕಿಸ್ತಾನ ಆಕ್ರಮಿತ ಪ್ರದೇಶದಿಂದ ತನ್ನ ಸೇನೆಯನ್ನು ಹಿಂದಕ್ಕೆ ಕರೆಸಿಕೊಳ್ಳಲು ನಿರಾಕರಿಸಿತು. ಆದರೆ, ಕಾಶ್ಮೀರ ಕಣಿವೆ 'ಕಶ್ಮೀರಿಯತ್' ಎನ್ನಿಸಿಕೊಂಡಿರುವುದನ್ನು ಪ್ರತಿನಿಧಿಸುವ ತಮ್ಮ ಸಂಸ್ಕೃತಿಗಳನ್ನು, ತಮ್ಮ ಜೀವನಶೈಲಿಯನ್ನು, ತಮ್ಮ ಸ್ವಾಯತ್ತತೆಯನ್ನು ಭಾರತ ರಕ್ಷಿಸುತ್ತದೆ ಎಂಬ ನಂಬಿಕೆಯಿಂದ ದೃಢವಾಗಿ ನಿಂತರು.

ಕಾಶ್ಮೀರಕ್ಕೇ ವಿಶಿಷ್ಟವಾದ ಸನ್ನಿವೇಶಗಳಿವು. ಇದರಿಂದಾಗಿಯೇ ಕಾಶ್ಮೀರ ರಾಜ್ಯಕ್ಕೆ ವಿಶೇಷ ಸ್ಥಾನಮಾನ ಕೊಡುವ ವಿಚಾರ ಮೂಡಿದ್ದು. ವಿಶ್ವಸಂಸ್ಥೆಯ ಮೂಲಕ ಅಂತರ್ರಾಷ್ಟ್ರೀಯ ಮಧ್ಯಪ್ರವೇಶ ನಡೆಯದಂತೆ ತಡೆಗಟ್ಟಿದ್ದು ಇಂತಹ ಒಂದು ಏರ್ಪಾಟು. ಇದರಿಂದಾಗಿಯೇ ಕಾಶ್ಮೀರವು ಭಾರತೀಯ ಒಕ್ಕೂಟದೊಳಗೆ ತನ್ನ ಸ್ವಾಯತ್ತತೆಯನ್ನು ಉಳಿಸಿಕೊಳ್ಳುತ್ತಲೇ ಭಾರತದ ಒಂದು ಭಾಗವಾಗಿ ಉಳಿಯುವುದು ಸಾಧ್ಯವಾಯಿತು.



ಮಹಾರಾಜ ಹರಿಸಿಂಗ್, ಶೇಖ್ ಅಬ್ದುಲ್ಲ ಮತ್ತು ನೆಹರು

## • ಮಹಾರಾಜನಿಗೆ ಬೆಂಬಲ ಕೊಟ್ಟಿದ್ದ ಶಕ್ತಿಗಳು ಯಾವವು?

ಕಾಶ್ಮೀರಿಗಳು ಮತ–ಧರ್ಮಗಳ ಎಲ್ಲೆಗಳನ್ನು ದಾಟಿ ನ್ಯಾಯ, ಪ್ರಜಾಪ್ರಭುತ್ವ ಮತ್ತು ಮಹಾರಾಜನ ಹಾಗೂ ಬ್ರಿಟಿಶರ ನಿರಂಕುಶ ಆಳ್ವಿಕೆಯಿಂದ ಸ್ವಾತಂತ್ರ್ಯದ ಪಾಳೆಯಗಾರೀ–ವಿರೋಧಿ ಪ್ರಜಾಸತ್ತಾತ್ಮಕ ಬೇಡಿಕೆಗಳ ಮೇಲೆ ಅಣಿನೆರೆಯುತ್ತಿದ್ದಾಗ ಆರೆಸ್ಸೆಸ್ ರಾಜಪ್ರಭುತ್ವಕ್ಕೆ ಬೆಂಬಲವಾಗಿ ಎಲ್ಲ ಪ್ರತಿಕ್ರಿಯಾವಾದಿ ಪಾಳೆಯಗಾರೀ ಶಕ್ತಿಗಳನ್ನು ಅಣಿಗೊಳಿಸುತ್ತಿತ್ತು. ತನ್ನ ಹಿಂದೂರಾಷ್ಟ್ರ ಪರಿಕಲ್ಪನೆಗೆ ಬದ್ಧವಾಗಿದ್ದ ಅದು, ಅದನ್ನು ಮುಂದೊಯ್ಯುತ್ತ ಕಾಶ್ಮೀರಿಗಳ ಹೋರಾಟಗಳನ್ನು ಕೋಮು ಆಧಾರದಲ್ಲಿ ವಿಭಜಿಸಲು ಪ್ರಯತ್ನಿಸುತ್ತಿತ್ತು. ಹಿಂದೂಗಳನ್ನು ರಕ್ಷಿಸುವ ಹೆಸರಿನಲ್ಲಿ ಅದು ಮಹಾರಾಜನ ಕುತಂತ್ರಗಳನ್ನು ಮತ್ತು ಪಾಳೆಯಗಾರೀ ವ್ಯವಸ್ಥೆಯನ್ನು ಬಹಿರಂಗವಾಗಿಯೇ ಬೆಂಬಲಿಸಿತು. ಜಮ್ಮುವಿನಲ್ಲಿ ಅದು 'ಪ್ರಜಾ ಪರಿಷದ್' ಎಂಬ ಫಲಕದ ಅಡಿಯಲ್ಲಿ ಕೆಲಸ ಮಾಡುತ್ತ ನ್ಯಾಶನಲ್ ಕಾನ್ಫರೆನ್ಸ್‌ನ ಹೆಚ್ಚುತ್ತಿದ್ದ ಪ್ರಭಾವವನ್ನು ತಡೆಯಲು ಪ್ರಯತ್ನಿಸುತ್ತಿತ್ತು.

ಜೂನ್–ಜುಲೈ 1947 ರಲ್ಲಿ ಭಾರತದ ಸ್ವಾತಂತ್ರ್ಯ ಸನ್ನಿಹಿತವಾಗುತ್ತಿದ್ದಾಗ ಒಂದು ಸ್ವತಂತ್ರ ಪ್ರಭುತ್ವವಾಗುವ ಮಹಾರಾಜನ ಬೇಡಿಕೆಯನ್ನು ಅದು ಬೆಂಬಲಿಸಿತು, ಮತ್ತು ಭಾರತಕ್ಕೆ ಸೇರ್ಪಡೆಯಾಗುವುದನ್ನು ವಿರೋಧಿಸಿತು. ಅತ್ತ ಕಣಿವೆಯಲ್ಲಿನ ಕಾಶ್ಮೀರಿಗಳು ಪಾಕಿಸ್ತಾನ–ಬೆಂಬಲಿತ ದಾಳಿಕೋರರನ್ನು ಎದುರಿಸಿ ಹಿಮ್ಮೆಟ್ಟಿಸುತ್ತಿದ್ದಾಗ ಇದರ ಸುಳಿವೇ ಇರಲಿಲ್ಲ. ಇನ್ನೂ ಹೊಲಸು ಸಂಗತಿಯೆಂದರೆ, ಅದು ಕೋಮುವಾದಿ ಉದ್ದೇಶಕ್ಕಾಗಿ ಯುವಜನರಿಗೆ ಶಸ್ತ್ರಗಳನ್ನು ಕೊಟ್ಟು ತರಬೇತಿ ನಡೆಸುತಿತ್ತು. ಅದರಿಂದಾಗಿ ಇಬ್ಬಾಗವಾದ ಭಾರತ ಹೊತ್ತಿ ಉರಿಯುತ್ತಿದ್ದಾಗ, ಇತ್ತ ಕಾಶ್ಮೀರ ಕಣಿವೆಯಲ್ಲಿ ಮಾತ್ರ ಯವುದೇ


ಶ್ರೀನಗರದಲ್ಲ ಬಂದಿಳಯುತ್ತಿರುವ ಭಾರತೀಯ ಸೇನೆ

ಕೋಮುವಾದಿ ಹಿಂಸಾಚಾರ ನಡೆಯಲಿಲ್ಲ. ಆದರೆ ಪಕ್ಕದ ಜಮ್ಮು ಪ್ರದೇಶದಲ್ಲಿ ಪ್ರಜಾಪರಿಷದ್ ನೇತೃತ್ವದಲ್ಲಿ, ಮತ್ತು ಮಹಾರಾಜನ ಬೆಂಬಲದಿಂದ ಒಂದು ಭೀಕರ ಕೋಮು ದಳ್ಳುರಿ ಹರಡಿತು. ಇದರಲ್ಲಿ ಜಮ್ಮುವಿನ ಹಲವಾರು ಮುಗ್ಧ ಮುಸ್ಲಿಮರ ಹತ್ಯಾಕಾಂಡ ನಡೆಯಿತು.

ಸೇರ್ಪಡೆಯ ದಸ್ತಾವೇಜಿಗೆ ಸಹಿ ಹಾಕಿದ ನಂತರ ಪ್ರಜಾಪರಿಷದ್ ತನ್ನ ಕೋಮುವಾದೀ ಎರಡು–ರಾಷ್ಟ್ರ ಸಿದ್ಧಾಂತದ ಆಧಾರದಲ್ಲಿ ಜಮ್ಮುವನ್ನು ಪ್ರತ್ಯೇಕಿಸಿ ರಾಜ್ಯ ರಚಿಸಬೇಕೆಂದು ಚಳುವಳಿ ಆರಂಭಿಸಿತು. ಸ್ವಾತಂತ್ರ್ಯದ ನಂತರವೂ ಭಾರತೀಯ ಬಾವುಟದ ಪಕ್ಕದಲ್ಲಿ ಮಹಾರಾಜನ ಬಾವುಟವೂ ಹಾರುವುದರ ಬಗ್ಗೆ ಆರೆಸ್ಸೆಸ್‌ಗೆ ಏನೇನೂ ಆಕ್ಷೇಪವಿರಲಿಲ್ಲ, ಎರಡೂ ಬಾವುಟಗಳನ್ನು ಅದು ಸ್ವೀಕರಿಸಿತ್ತು. ಆದರೆ ಹೊಸದಾಗಿ ರಚಿಸಲ್ಪಟ್ಟ ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ಸಭೆ ರಾಜಪ್ರಭುತ್ವವನ್ನು ನಿರ್ಮೂಲ ಮಾಡಿ ಮಹಾರಾಜನ ಬಾವುಟದ ಸ್ಥಾನದಲ್ಲಿ ರಾಜ್ಯದ ಸಮಸ್ತ ಜನತೆಯ ಹೋರಾಟವನ್ನು ಪ್ರತಿನಿಧಿಸುವ ರಾಜ್ಯದ ಬಾವುಟವನ್ನು ನಿರ್ಧರಿಸಿದ ನಂತರವೇ ಅದು 'ಒಂದು ಬಾವುಟ, ಒಂದು ರಾಷ್ಟ್ರ' ಎಂಬ ಬೇಡಿಕೆಯನ್ನು ಎತ್ತಿತು. ನೇಪಾಳದಲ್ಲೂ ರಾಜಪ್ರಭುತ್ವದ ಪರವಾದ ಶಕ್ತಿಗಳೊಂದಿಗೆ ಸಂಪರ್ಕದಲ್ಲಿದ್ದ ಆರೆಸ್ಸೆಸ್ ಸದಾ ರಾಜಪ್ರಭುತ್ವವನ್ನು ಬೆಂಬಲಿಸಿದಂತೆ, ಕಾಶ್ಮೀರದಲ್ಲಿ ಪಾಳೆಯಗಾರೀ ರಾಜ್ಯಭಾರದ ಅತ್ಯಾಚಾರಗಳು ಮತ್ತು ಶೋಷಣೆಗಳ ವಿರುದ್ಧ ಹೋರಾಟ ನಡೆಯುತ್ತಿದ್ದಾಗ, ಧರ್ಮದ ಹೆಸರಿನಲ್ಲಿ ಮಹಾರಾಜನ ಬೆಂಬಲಕ್ಕೆ ನಿಂತಿತ್ತು.

ಅದು ಜಮ್ಮು ಮತ್ತು ಕಾಶ್ಮೀರದ ಜನತೆಯ ಐಕ್ಯತೆಯ ಹೋರಾಟವನ್ನು ದುರ್ಬಲಗೊಳಿಸಿತು.

ದಾಳಿಕೋರರರನ್ನು ಹಿಮ್ಮೆಟ್ಟಿಸಲು ಭಾರತೀಯ ಸೇನೆಯ ನೆರವಿಗೆ ನಿಂತ ಕಾಶ್ಮೀರಿ ನಾಗರಿಕರ ತಂಡ



## • ವಿಧಿ 370 ಮತ್ತು 35ಎ ರಲ್ಲಿ ಏನಿದೆ, ಅದು ಬಂದದ್ದು ಯಾವಾಗ?

ಅಕ್ಟೋಬರ್ 30, 1947 ರಂದು ಮಹಾರಾಜ ತುರ್ತು ಆಡಳಿತದ ಮುಖ್ಯಸ್ಥರಾಗಿ ಶೇಖ್ ಅಬ್ದುಲ್ಲರನ್ನು ನೇಮಕ ಮಾಡಿದರು. ನಂತರ ಮಾರ್ಚ್ 5, 1948ರಂದು ಇದರ ಸ್ಥಾನದಲ್ಲಿ ಒಂದು ಮಧ್ಯಂತರ ಸರಕಾರ ಬಂತು. ಶೇಖ್ ಅಬ್ದುಲ್ಲ ಅದರಲ್ಲಿ ಪ್ರಧಾನ ಮಂತ್ರಿಯಾಗಿದ್ದರು. ರಾಜ್ಯಕ್ಕೆ ಒಂದು ಸಂವಿಧಾನವನ್ನು ರೂಪಿಸಲು ಒಂದು ರಾಷ್ಟ್ರೀಯ ಸಭೆಯನ್ನು ಕರೆಯಬೇಕೆಂದು ಅದಕ್ಕೆ ಹೇಳಲಾಯಿತು. ಆದರೆ ಮಹಾರಾಜ ಹೆಸರಿಗೆ ಮುಖ್ಯಸ್ಥರಾಗಿ ಉಳಿದರು.

ಭಾರತ ಸರಕಾರ ಕಾಶ್ಮೀರದ ಮುಖಂಡತ್ವಕ್ಕೆ ವಿಶೇಷ ಸ್ಥಾನಮಾನ ನೀಡುವುದಾಗಿ ಪ್ರತಿಜ್ಞೆ ಮಾಡಿತ್ತು. ಆ ಕುರಿತಂತೆ ಮಾತುಕತೆಯನ್ನು ಆರಂಭಿಸಿತು.

ವಲ್ಲಭಭಾಯಿ ಪಟೇಲ್ ಕಾಶ್ಮೀರಕ್ಕೆ ಯಾವುದೇ ವಿಶೇಷ ಪರಿಗಣನೆಗೆ ವಿರುದ್ಧವಾಗಿದ್ದರು ಎಂದು ಆರೆಸ್ಸೆಸ್–ಬಿಜೆಪಿ ಅಪಪ್ರಚಾರ ನಡೆಸುತ್ತಿವೆ. ನಿಜಸಂಗತಿ ತದ್ವಿರುದ್ಧವಾಗಿದೆ. ಮೇ 15 ಮತ್ತು 16ರಂದು ಅವರ ನಿವಾಸದಲ್ಲಿ ಒಂದು ಸಭೆಯನ್ನು ಕರೆಯಲಾಯಿತು. ಅದರಲ್ಲಿ ನೆಹರು ಮತ್ತು ಅಬ್ದುಲ್ಲ ಹಾಜರಿದ್ದರು. "ಬೇರೆ ಯಾವ ವಿಷಯಗಳನ್ನು ರಾಜ್ಯ ಒಪ್ಪಬಹುದು ಎಂಬುದನ್ನು ರಾಜ್ಯದ ಸಂವಿಧಾನ ಸಭೆಯು ಅದನ್ನು ಕರೆದಾಗ ನಿರ್ಧರಿಸುತ್ತದೆ" ಎಂದು ಈ ಸಭೆಯಲ್ಲಿ ಎಲ್ಲರೂ ಒಪ್ಪಿರುವುದಾಗಿ ನೆಹರು ಅಬ್ದುಲ್ಲರಿಗೆ ಬರೆದ ಪತ್ರದಲ್ಲಿ ದಾಖಲಾಗಿದೆ. ಶ್ಯಾಮಪ್ರಸಾದ್ ಮುಖರ್ಜಿ ಆಗ ನೆಹರು ಸಂಪುಟದ ಸದಸ್ಯರಾಗಿದ್ದರು, ಮತ್ತು ಕಾಶ್ಮೀರ ಕುರಿತ ನಿರ್ಧಾರಗಳಲ್ಲಿ ಭಾಗಿಯಾಗಿದ್ದರು. ವಿಧಿ 370ನ್ನು(ಕರಡು ಸಂವಿಧಾನದಲ್ಲಿ 306ಎ) ಅಂಗೀಕರಿಸಿದ ಅಧಿವೇಶನದ ಅಧ್ಯಕ್ಷತೆಯನ್ನು ಡಾ.ರಾಜೇಂದ್ರ ಪ್ರಸಾದ್ ವಹಿಸಿದ್ದರು. ಹೀಗೆ ಆಗಿನ ಸಮಸ್ತ ಮುಖಂಡತ್ವಕ್ಕೆ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕುರಿತಂತೆ ಒಪ್ಪಿಗೆಯಿತ್ತು.

ಈ ಚರ್ಚೆಗಳು ವಿಧಿ 370ರಲ್ಲಿ ಹರಳುಗಟ್ಟಿಕೊಂಡವು. ಇದನ್ನು ಸಂವಿಧಾನ ಸಭೆ ಅಕ್ಟೋಬರ್ 1949ರಲ್ಲಿ ಅಂಗೀಕರಿಸಿತು. ಅದು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸ್ವಾಯತ್ತತೆಯ ಚೌಕಟ್ಟನ್ನು ಒದಗಿಸಿತು. ಅದು ಸ್ವಂತ ಸಂವಿಧಾನವನ್ನು ಮತ್ತು ಬಾವುಟವನ್ನು ಹೊಂದಲು ಮತ್ತು ಸೇರ್ಪಡೆಯ ದಸ್ತಾವೇಜಿನಲ್ಲಿ ನಮೂದಿಸಿದ ಮೂರು ವಿಷಯಗಳನ್ನು(ವಿದೇಶ ವ್ಯವಹಾರಗಳು, ರಕ್ಷಣೆ ಮತ್ತು ಸಂಪರ್ಕ) ಬಿಟ್ಟು ಉಳಿದ ಎಲ್ಲ ವಿಷಯಗಳ ಮೇಲೆ ತನ್ನ ಅಧಿಕಾರವ್ಯಾಪ್ತಿಯನ್ನು ಹೊಂದಲು ಅವಕಾಶ ನೀಡಿತು. ಸೇರ್ಪಡೆಯ ದಸ್ತಾವೇಜಿನಲ್ಲಿ ನಮೂದಿಸಿದ ವಿಷಯಗಳನ್ನು ಕುರಿತ ಕೇಂದ್ರೀಯ ಕಾನೂನುಗಳಿಗೆ ರಾಜ್ಯ ಸರಕಾರದೊಂದಿಗೆ "ಸಮಾಲೋಚನೆಗಳು" ಸಾಕು, ಆದರೆ ಉಳಿದ ಎಲ್ಲ ಕಾನೂನುಗಳನ್ನು ಕಾಶ್ಮೀರದಲ್ಲಿ ಅನ್ವಯಿಸಲು ರಾಜ್ಯ ಸರಕಾರದ ನಿರ್ದಿಷ್ಟ ಸಹಮತ ಮತ್ತು ಒಪ್ಪಿಗೆ ಅಗತ್ಯವಾಗಿತ್ತು. ಸಂವಿಧಾನ ಸಭೆಯಲ್ಲಿ ಗೋಪಾಲಸ್ವಾಮಿ ಅಯ್ಯಂಗಾರ್ ಈ ವಿಧಿ ಅಂಗೀಕಾರಗೊಂಡಾಗ ಅಕ್ಟೋಬರ್ 17, 1949ರಂದು ಮಾಡಿದ ಭಾಷಣದಲ್ಲಿ ವಿವರಣೆ ನೀಡುತ್ತ "ಇದು(ವಿಶೇಷ ಸ್ಥಾನಮಾನ) ಕಾಶ್ಮೀರದ ಜನತೆಗೆ

ಮತ್ತು ಸರಕಾರಕ್ಕೆ ನಮ್ಮ ಬದ್ಧತೆಗಳಲ್ಲಿ ಒಂದು" ಎಂದರು. ಈಗ ಬಿಜೆಪಿಯ ಅಡಿಯಲ್ಲಿ ಈ ಬದ್ಧತೆ ಚಿಂದಿಯಾಗಿ ಬಿಟ್ಟಿದೆ.

ಸಂವಿಧಾನದ 370ನೇ ವಿಧಿಯಲ್ಲಿ ಭಾರತೀಯ ಒಕ್ಕೂಟದ ಒಳಗೆ 'ಕಶ್ಮೀರಿಯತ್" ಎಂದು ಹೆಸರಾದ ತಮ್ಮ ಅಸ್ಮಿತೆ ಮತ್ತು ಜೀವನ ಶೈಲಿಯನ್ನು ಕಾಯ್ದುಕೊಳ್ಳುವ ಕಾಶ್ಮೀರಿ ಜನತೆಯ ಆಕಾಂಕ್ಷೆಗಳು ಸಾಕಾರಗೊಂಡಿವೆ. ಇದು ಸಂವಿಧಾನದಲ್ಲಿ 370ನೇ ವಿಧಿಯನ್ನು ಒಳಗೊಂಡುದರ ಉಗಮ. ಇದನ್ನು ಅನುಸರಿಸಿ 1952ರಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದ ಪ್ರತಿನಿಧಿಗಳು ದಿಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು.

35ಎ ವಿಧಿ ತನ್ನ ಅಧಿಕಾರವನ್ನು 370ನೇ ವಿಧಿಯಿಂದ ಪಡೆಯುತ್ತದೆ. ಇದನ್ನು 1954 ರಲ್ಲಿ ಒಂದು ರಾಷ್ಟ್ರಪತಿ ಆದೇಶದ ಮೂಲಕ ಪಾಸು ಮಾಡಲಾಯಿತು. ಇದು ಜಮ್ಮು ಮತ್ತು ಕಾಶ್ಮೀರ ಶಾಸಕಾಂಗಕ್ಕೆ ರಾಜ್ಯದ ಖಾಯಂ ನಿವಾಸಿಗಳು ಮತ್ತು ಅವರ ಹಕ್ಕುಗಳು ಹಾಗೂ ವಿಶೇಷಾಧಿಕಾರಗಳನ್ನು ನಿರೂಪಿಸುವ ಅಧಿಕಾರವನ್ನು ಕೊಡುತ್ತದೆ.

ಈ ಮೊದಲು ಮಹಾರಾಜರ ಆಳ್ವಿಕೆಯ ಸಮಯದಲ್ಲಿ, ಕಾಶ್ಮೀರಿ ಪಂಡಿತ್ ಸಮುದಾಯದವರ ನೇತೃತ್ವದಲ್ಲಿ ಸ್ಥಳೀಯ ಜನಗಳು ಹೊರಗಿನವರಿಂದ, ಈ ಸುಂದರ ರಾಜ್ಯದಲ್ಲಿ ಭೂಮಿ ಖರೀದಿಸ ಬಯಸುವ ಬ್ರಿಟಿಶ್ ಮತ್ತು ಶ್ರೀಮಂತ ಭಾರತೀಯ ಬೂರ್ಜ್ವಾಗಳಿಂದ ಒಂದು ರೀತಿಯ ರಕ್ಷಣೆಯನ್ನು ಬಯಸಿದರು. ಇದಕ್ಕಾಗಿ ಅಂಗೀಕರಿಸಿದ 1927ರ "ವಂಶಾನುಗತ ರಾಜ್ಯ ವಿಷಯ ಆದೇಶ" ರಾಜ್ಯದ ಪ್ರಜೆಗಳಿಗೆ, ರಾಜ್ಯೇತರ ಪ್ರಜೆಗಳಿಗೆ ಇರದ ಸರಕಾರೀ ಕಚೇರಿಯ ಮತ್ತು ಭೂಬಳಕೆ ಹಾಗೂ ಒಡೆತನದ ಹಕ್ಕುಗಳನ್ನು ನೀಡಿತು. ಈ ಕಾಯದೆಯನ್ನು 1954ರಲ್ಲಿ ರದ್ದು ಮಾಡಿ ವಿಧಿ 35ಎನ್ನು ಸೇರಿಸಲಾಯಿತು. ಇದು ಜಮ್ಮು ಮತ್ತು ಕಾಶ್ಮೀರ ಶಾಸಕಾಂಗಕ್ಕೆ ಖಾಯಂ ನಿವಾಸಿಗಳ ಪರಿಮಿತಿಗಳನ್ನು ನಿರ್ಧರಿಸುವ ಹಕ್ಕನ್ನು ಕೊಟ್ಟಿತು.

ಈ ಬಗ್ಗೆ ಸುಪ್ರಿಂ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿರುವಾಗಲೇ ಈ ವಿಧಿಯನ್ನು ತೆಗೆದಿರುವುದು ಬಿಜೆಪಿ ಈ ಮುಸ್ಲಿಂ ಪ್ರಾಬಲ್ಯದ ರಾಜ್ಯದ ಜನಸಂಖ್ಯಾ ಸ್ವರೂಪವನ್ನು ಬದಲಿಸುವ ಆತುರದಲ್ಲಿ ಇದೆ ಎಂಬುದನ್ನು ಬಿಂಬಿಸುತ್ತದೆ. ಈಗ ಪ್ರತಿಯೊಬ್ಬರೂ ಕಾಶ್ಮೀರದಲ್ಲಿ ಭೂಮಿಯ ತುಣುಕನ್ನು ಹೊಂದಬಹುದು ಎಂಬ ಬಿಜೆಪಿಯ ಪ್ರಚಾರ ಈ ಗುರಿಸಾಧನೆಗಾಗಿಯೇ ಇದೆ. ಇದು ಪ್ಯಾಲೆಸ್ತೀನ್‌ನ ಪಶ್ಚಿಮ ತಟದಲ್ಲಿ ಜನಸಂಖ್ಯಾ ಸ್ವರೂಪವನ್ನು ಬದಲಿಸಲು ಇಸ್ರೇಲ್ ಸರಕಾರ ಯೆಹೂದಿ ನೆಲೆಸಿಗರನ್ನು ಪ್ರೋತ್ಸಾಹಿಸುವ ಝಿಯೋನಿಸ್ಟ್ ಧೋರಣೆಯ ರೀತಿಯದ್ದೇ ಆಗಿದೆ.

ನಾವು ಮುಂದೆ ನೋಡುವಂತೆ, 370ನೇ ವಿಧಿಯ ಹೆಚ್ಚಿನ ಅಂಶಗಳನ್ನು ಸಮಯ ಕಳೆದಂತೆ ದುರ್ಬಲಗೊಳಿಸಲಾಗಿದೆ. ಕಾಂಗ್ರೆಸ್ ನೇತೃತ್ವದ ಸರಕಾರಗಳು ಕೂಡ ಸೇರಿದಂತೆ ಕೇಂದ್ರದಲ್ಲಿನ ಸರಕಾರಗಳು ಜಮ್ಮು ಮತ್ತು ಕಾಶ್ಮೀರದ ಸ್ವಾಯತ್ತತೆಯನ್ನು ಗಮನಾರ್ಹವಾಗಿ ಕ್ಷಯಿಸಿ ಬಿಟ್ಟಿವೆ.

## • ವಿಶೇಷ ಅಂಶಗಳು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಮಾತ್ರವೇ ಇವೆಯೇ?

ಇಂತಹ ವಿಶೇಷ ಅಂಶಗಳನ್ನು ಪಡೆದಿರುವುದು ಜಮ್ಮು ಮತ್ತು ಕಾಶ್ಮೀರ ರಾಜ್ಯ ಮಾತ್ರ ಎಂದು ಬಿಜೆಪಿ ಪ್ರಚಾರ ಚಿತ್ರಿಸುತ್ತದೆ. ನಿಜಸಂಗತಿ ತದ್ವಿರುದ್ಧವಾಗಿದೆ. ಇತರ ರಾಜ್ಯಗಳಿಗೂ, ಖಾಯಂ ನಿವಾಸಿಗಳನ್ನು ಬಿಟ್ಟು ಇತರರು ಭೂಮಿ ಖರೀದಿಸಲು ಹಾಗೂ ಉದ್ಯೋಗ ಪಡೆಯಲು ನಿಷೇಧಿಸುವ ವಿಶೇಷ ಅವಕಾಶಗಳನ್ನು 371ನೇ ವಿಧಿ, ಮತ್ತು 371(ಎ) ಯಿಂದ 371(ಐ) ವರೆಗಿನ ಒಟ್ಟು 9 ವಿಧಿಗಳು ಕೊಟ್ಟಿವೆ. ಈ ವಿಧಿಯ ಅಡಿಯಲ್ಲಿ ಬರುವ ರಾಜ್ಯಗಳೆಂದರೆ: ಮಹಾರಾಷ್ಟ್ರ, ಗುಜರಾತ್, ಅರುಣಾಚಲ ಪ್ರದೇಶ, ಅಸ್ಸಾಂ, ಹಿಮಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಝೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರಾ, ಉತ್ತರಾಖಂಡ, ಗೋವ ಮತ್ತು ಕರ್ನಾಟಕ.

ಇವಲ್ಲದೆ ಸಂವಿಧಾನದ ಪರಿಶಿಷ್ಟ(ಶೆಡ್ಯೂಲ್) 5 ಮತ್ತು 6 ಆದಿವಾಸಿ/ಬುಡಕಟ್ಟು ಒಡೆತನದ/ವಾಸಿಸುವ ಭೂಮಿಯ ರಕ್ಷಣೆಗಾಗಿಯೇ ಇವೆ. ಆ ಭೂಮಿಯನ್ನು ಯಾವುದೇ ಬುಡಕಟ್ಟೇತರರು ಖರೀದಿಸಲು ಬಿಡುವುದಿಲ್ಲ.

ಬಿಜೆಪಿಯ ಬೂಟಾಟಿಕೆ ಎಂತಹ ಮಟ್ಟದ್ದು ಎಂಬುದನ್ನು ಬಿಜೆಪಿ ಮುಖಂಡರ ನಿಲುವುಗಳಲ್ಲೇ ಕಾಣಬಹುದು. 35ಎ ರದ್ಧತಿಯ ನಂತರ ಈಗ ಭಾರತದ ಇತರ ರಾಜ್ಯಗಳಲ್ಲಿ ಹೇಗೆ ಜನರು ಭೂಮಿ ಖರೀದಿಸಲು ಕಾಶ್ಮೀರಕ್ಕೆ ಹೋಗಬಹುದು ಎಂಬ ದುಷ್ಟ ಪ್ರಚಾರವನ್ನು ಬಿಜೆಪಿ ಮುಖಂಡರು ಹಲವರು ಮಾಡುತ್ತಿದ್ದರೆ, ಜಮ್ಮುನಲ್ಲಿರುವ ಬಿಜೆಪಿ ಮುಖಂಡರು 'ಹೊರಗಿನವರಿಂದ ಭೂಮಿಯನ್ನು ರಕ್ಷಿಸಲು ವಿಶೇಷ ರಕ್ಷಣೆಗಳನ್ನು ಕೊಡಬೇಕು ಎಂದು ಆಗ್ರಹಿಸುತ್ತಿದ್ದಾರೆ. ಮೊದಲು 35ಎ ನ್ನು ರದ್ದು ಮಾಡುತ್ತಾರೆ, ನಂತರ 35ಎ ಖಾತ್ರಿಪಡಿಸಿದ್ದ ವಿಶೇಷ ರಕ್ಷಣೆಗಳು ಬೇಕು ಎಂದು ಆಗ್ರಹಿಸುತ್ತಾರೆ!

371 (1949)–ಮಹಾರಾಷ್ಟ್ರ ಮತ್ತು ಗುಜರಾತ
371ಎ(1962) –ನಾಗಾಲ್ಯಾಂಡ್
371ಬಿ(1969)–ಅಸ್ಸಾಂ
371ಸಿ(1971)– ಮಣಿಪುರ
371ಡಿ,ಇ (1973)–ಆಂಧ್ರಪ್ರದೇಶ)
371ಎಫ್(1975)–ಸಿಕ್ಕಿಂ
371 ಜಿ(1986)–ಮಿಝೋರಾಂ
371 ಹೆಚ್(1986) ಅರುಣಾಚಲ ಪ್ರದೇಶ
371 ಜೆ(2012)–ಕರ್ನಾಟಕ(ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಪ್ರತ್ಯೇಕ ಅಭಿವೃದ್ಧಿ ಮಂಡಳ)

ಭಾರತೀಯ ಸಂವಿಧಾನದಲ್ಲಿ ಈ ವಿಶೇಷ ಅವಕಾಶಗಳನ್ನು, ಒಂದು ನಿರ್ದಿಷ್ಟ ಪ್ರದೇಶದ ಅಥವ ಒಂದು ರಾಜ್ಯದ ನಿರ್ದಿಷ್ಟ ಅಗತ್ಯಗಳನ್ನು ಈಡೇರಿಸುವದಕ್ಕಾಗಿಯೇ ಒದಗಿಸಲಾಗಿದೆ. ಇವು ಅದರ ಒಕ್ಕೂಟ ಸ್ವರೂಪದ ಭಾಗವೇ ಆಗಿದೆ. ಭಾರತ ಭಾಷೆ, ಸಂಸ್ಕೃತಿಗಳು, ಜಾತಿಗಳು, ಧಾರ್ಮಿಕ ನಂಬಿಕೆಗಳಲ್ಲಿ ವ್ಯಾಪಕ ವೈವಿಧ್ಯತೆಗಳು ಇರುವ ಒಂದು ದೇಶ. ಅಲ್ಲದೆ ಅಸಮಾನ ಬೆಳವಣಿಗೆಗಳೂ ಇರುವ ದೇಶ. ಭಾರತದ ಸಂವಿಧಾನ ಈ ವೈವಿಧ್ಯತೆಗಳನ್ನು ಗುರುತಿಸಿ ಅವನ್ನು ಸರಿದೂಗಿಸಲು ವಿಧಾಯಕ ಕ್ರಿಯೆಗಳಿಗೆ ಅನುವು ಮಾಡಿಕೊಡಲು ವಿವಿಧ ಪರಿಚ್ಛೇದಗಳನ್ನು ಒದಗಿಸಿದೆ.

ಜಮ್ಮು ಮತ್ತು ಕಾಶ್ಮೀರದ ಅಗತ್ಯಗಳು 1947ರ ಅವಧಿಯಲ್ಲಿ ಒಂದು ಮುಸ್ಲಿಂ ಬಹುಮತದ ರಾಜ್ಯವು ಒಂದು ಮುಸ್ಲಿಂ ಬಹುಸಂಖ್ಯಾಕ ಪ್ರಭುತ್ವವಾಗಲು ಹೊರಟಿದ್ದ ಪಾಕಿಸ್ತಾನವನ್ನು ಸೇರುವ ಬದಲು ಒಂದು ಜಾತ್ಯತೀತ ಭಾರತಕ್ಕೆ ಸೇರ್ಪಡೆಯಾಗುವುದು ಸೂಕ್ತ ಎಂದು ಸೇರ್ಪಡೆಗೊಂಡ ರೀತಿಯಿಂದ ಎದ್ದು ಬಂದವುಗಳು. 370ನೇ ವಿಧಿ ಭಾರತೀಯ ಪ್ರಭುತ್ವ ಅವರ ಅಸ್ಮಿತೆಯನ್ನು ಗೌರವಿಸುತ್ತದೆ ಎಂದು ಜಮ್ಮು ಮತ್ತು ಕಾಶ್ಮೀರದ ಜನತೆಗೆ ನೀಡಿದ ಒಂದು ಗಂಭೀರ ಆಶ್ವಾಸನೆಯಾಗಿದೆ. ಇದನ್ನೇ ಬೇರೆ ಹಲವು ರಾಜ್ಯಗಳಿಗೂ ಮತ್ತು ಪ್ರದೇಶಗಳಿಗೂ 371ನೇ ವಿಧಿಯ ಅಡಿಯಲ್ಲಿ ಕೊಡಲಾಗಿದೆ. ಮೋದಿ ಸರಕಾರ ಈಗ 370ನೇ ವಿಧಿಯನ್ನು ಹೆಚ್ಚು ಕಡಿಮೆ ರದ್ದೇ ಮಾಡಿಬಿಟ್ಟು ಈ ಆಶ್ವಾಸನೆಗೆ ಘಾತ ಬಗೆದಿದೆ, ದೇಶದ ಒಕ್ಕೂಟ ತತ್ವಕ್ಕೆ ಭಾರೀ ಹೊಡೆತ ಹಾಕಿದೆ. ನಾಳೆ ಒಂದಿಲ್ಲೊಂದು ನೆಪವೊಡ್ಡಿ ಇತರ ರಾಜ್ಯಗಳಿಗೆ ಇರುವ ವಿಶೇಷ ಅಂಶಗಳನ್ನೂ ರದ್ದು ಮಾಡಬಹುದು.

ಮೊದಲು ಅವರು ವಿಧಿ 370ಕ್ಕೆ ಬಂದರು,
ನಾನು ಬಾಯಿ ತೆರೆಯಲಿಲ್ಲ,
ಏಕೆಂದರೆ ನಾನು ಕಾಶ್ಮೀರಿ ಆಗಿರಲಿಲ್ಲ..




ವ್ಯಂಗ್ಯಚಿತ್ರ: ಆರ್ ಪ್ರಸಾದ್

## • ಜಮ್ಮು ಮತ್ತು ಕಾಶ್ಮೀರದಲ್ಲಿ "ವಿಶೇಷ ಸ್ಥಾನಮಾನ"ವನ್ನು ಜಾರಿಗೊಳಿಸಿದ್ದು ಹೇಗೆ?

ಕಾಶ್ಮೀರದ ಸಂವಿಧಾನದ ಕರಡನ್ನು ರೂಪಿಸಲು ರಚಿಸಿದ ಸಂವಿಧಾನ ಸಭೆ 45 ಸದಸ್ಯರ ಒಂದು ಚುನಾಯಿತ ಸಂಸ್ಥೆಯಾಗಿತ್ತು. ಅದನ್ನು ಕೇಂದ್ರ ಸರಕಾರದ ಸಹಮತದಿಂದ ರಚಿಸಿ ನವಂಬರ್ 5, 1951ರಂದು ಅದರ ಮೊದಲ ಸಭೆ ಕರೆಯಲಾಯಿತು. ರಾಜ್ಯಕ್ಕೆ ಒಂದು ಸಂವಿಧಾನವನ್ನು ರೂಪಿಸುವ ಜನಾದೇಶವನ್ನು ಪೂರ್ಣಗೊಳಿಸದ ಮೇಲೆ ನವಂಬರ್ 1956ರಲ್ಲಿ ಅದು ತನ್ನನ್ನು ವಿಸರ್ಜಿಸಿಕೊಂಡಿತು.

ಆ ಸಂವಿಧಾನದ 3ನೇ ವಿಧಿ "ಕಾಶ್ಮೀರ ಭಾರತದ ಸಮಗ್ರ ಭಾಗವಾಗಿದೆ ಮತ್ತು ಆಗಿರುತ್ತದೆ" ಎಂದು ಹೇಳಿದೆ. ಹೀಗಿರುವಾಗ ಅದು ಪ್ರತ್ಯೇಕತೆಗೆ ದಾರಿ ಮಾಡುತ್ತದೆ ಎಂದು ಹೇಳಲು ಹೇಗೆ ಸಾಧ್ಯ?

ಇನ್ನೂ ಮಹತ್ವದ ಸಂಗತಿಯೆಂದರೆ, ಭಾರತೀಯ ಸಂವಿಧಾನದಲ್ಲಿರುವ ಎಲ್ಲ ಸ್ವಾತಂತ್ರ್ಯಗಳು, ತಾನು ಆಯ್ದುಕೊಳ್ಳುವ ಯಾವುದೇ ಧರ್ಮವನ್ನು ಆಚರಿಸುವ ಸ್ವಾತಂತ್ರ್ಯವೂ ಕೂಡ ಕಾಶ್ಮೀರದ ಸಂವಿಧಾನದ ಭಾಗವಾಗಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಈ ಸಂವಿಧಾನ ಒಂದು ಜಾತ್ಯತೀತ ದಸ್ತಾವೇಜು, ಅದು ಮುಸ್ಲಿಂ ಮೂಲಭೂತವಾದವನ್ನು ಅಥವ ಪ್ರತ್ಯೇಕತೆಯನ್ನು ಪ್ರೋತ್ಸಾಹಿಸುತ್ತದೆ ಎಂಬ ಅಪಪ್ರಚಾರದಿಂದ ಬಹಳ ದೂರ ಇರುವಂತದ್ದು.



**ಶೇಖ್ ಅಬ್ದುಲ್ಲಾ "ಉಳುವವನೇ ಹೊಲದೊಡೆಯ' ಆದೇಶಕ್ಕೆ ಸಹಿ ಹಾಕುತ್ತಿರುವುದು, ಜುಲೈ 1950**

ತದ್ವಿರುದ್ಧವಾಗಿ, ಸಂವಿಧಾನ ಸಭೆ, ವಿಶೇಷ ಸ್ಥಾನಮಾನದ ಪ್ರಯೋಜನವನ್ನು ಬಳಸಿಕೊಂಡು ಆ ವೇಳೆಯಲ್ಲಿ ಭಾರತದ ಇತರೆಡೆಗಳಲ್ಲಿ ಮಾಡಲು ಅವಕಾಶವಿಲ್ಲದಂತಹ ತೀವ್ರಗಾಮಿ ಕ್ರಮಗಳನ್ನು ಕೈಗೊಂಡಿತು.

ಮೊದಲಿಗೆ, ಅದು ರಾಜಪ್ರಭುತ್ವವನ್ನು ಮತ್ತು ಮಹಾರಾಜರ ವಿಶೇಷಾಧಿಕಾರಗಳನ್ನು ಅಂತ್ಯಗೊಳಿಸುವ ಒಂದು ಠರಾವನ್ನು ಅಂಗೀಕರಿಸಿತು. ಹೀಗೆ ಅದು ಭಾರತದ ಇತರೆಡೆಗಳಲ್ಲಿ ರಾಜಧನಗಳನ್ನು ಅಂತ್ಯಗೊಳಿಸುವ ಇಂತಹ ಶಾಸನವನ್ನು ತರುವ ಎಷ್ಟೋ ಮೊದಲೇ ಕಾಶ್ಮೀರದ ಜನತೆಗೆ ಪ್ರಯೋಜನಕಾರಿಯಾದ ಪ್ರಜಾಪ್ರಭುತ್ವ ನಿಲುವುಗಳನ್ನು ಅಂಗೀಕರಿಸಿತ್ತು.

ಎರಡನೆಯದಾಗಿ, ಅದು 'ದೊಡ್ಡ ಭೂಮಿ ಎಸ್ಟೇಟುಗಳ ಅಂತ್ಯ ಮತ್ತು ಹತಾಶ ಸಾಲಗಾರರ ಪರಿಹಾರ ಕಾಯ್ದೆ, 1950'ನ್ನು ಅಂಗೀಕರಿಸಿತು. ಈ ಮೂಲಕ ಆ ರಾಜ್ಯ ಅತ್ಯಂತ ತೀವ್ರಗಾಮಿಯಾದ ಭೂಸುಧಾರಣೆ ಕಾರ್ಯಕ್ರಮವನ್ನು ಅಂಗೀಕರಿಸಿತು. ಇದು ಭೂಮಾಲಕರ ಎಸ್ಟೇಟುಗಳನ್ನು ಪರಿಹಾರ ನೀಡದೆ ಕೊನೆಗೊಳಿಸಿತು. ಭೂಮಾಲಕರ ಹಕ್ಕುಗಳನ್ನು ರಕ್ಷಿಸುವ ಭಾರತೀಯ ಸಂವಿಧಾನದ ವಿಧಿ 31, ಕಾಶ್ಮೀರದ ವಿಶೇಷ ಸ್ಥಾನಮಾನದಿಂದಾಗಿ ಅಲ್ಲಿಗೆ ಅನ್ವಯವಾಗುತ್ತಿರಲಿಲ್ಲವಾದ್ದರಿಂದ ಇದು ಸಾಧ್ಯವಾಯಿತು.

ಈ ಎರಡು ಕ್ರಮಗಳು ಪ್ರತಿಗಾಮಿ ಪಾಳೆಯಗಾರೀ ಶಕ್ತಿಗಳನ್ನು ಸಿಟ್ಟಿಗೆಬ್ಬಿಸಿದವು. ಇದು ರಾಜಪ್ರಭುತ್ವದ ಪರವಾದ ಆರೆಸ್ಸೆಸ್ ಲಾಬ್ಬಿಗಳಿಗೆ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನದ ವಿರುದ್ಧ ಪ್ರಚಾರವನ್ನು ಹೆಚ್ಚಿಸಲು ಒಂದು ಪ್ರಮುಖ ಕಾರಣವಾಯಿತು.

ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಾತಿಯ ಪ್ರಶ್ನೆಯನ್ನು ಈಗ ಎತ್ತಲಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಉದ್ಯೋಗಕ್ಕೆ ಮೀಸಲಾತಿ ಇದೆ. ಆದರೂ ಇಂತಹ ಯಾವುದಾದರೂ ಕುಂದು-ಕೊರತೆಗಳಿದ್ದರೆ, ಅವನ್ನು ಎತ್ತಬಹುದಾಗಿತ್ತು ಮತ್ತು ರಾಜಕೀಯ ಸಂವಾದಗಳ ಮೂಲಕ ಬಗೆಹರಿಸಬಹುದಾಗಿತ್ತು. ಆದರೆ ಈ ಎಲ್ಲಾ ದಶಕಗಳಲ್ಲಿ ಇಂತಹ ಪ್ರಶ್ನೆಗಳನ್ನು ಎಂದೂ ಎತ್ತಿರಲಿಲ್ಲ. ಈಗ ಅವನ್ನು ಆಳುವ ಪಕ್ಷದ ಮುಖಂಡರು ತಮ್ಮ ಕರಾಳ ಕ್ರಮಗಳನ್ನು ದಮನಿತ ವಿಭಾಗಗಳು ಬೆಂಬಲಿಸುವಂತೆ ಮಾಡಲು ಕೇವಲ ನೆಪಗಳಾಗಿ ಎತ್ತುತ್ತಿದ್ದಾರಷ್ಟೇ.

## • 370ನೇ ವಿಧಿ ಭಾರತದೊಂದಿಗೆ ಜಮ್ಮು ಮತ್ತು ಕಾಶ್ಮೀರದ ಸಮಗ್ರೀಕರಣವನ್ನು ತಡೆದಿದೆಯೇ?

ವಿಧಿ 370ನ್ನು ರದ್ದು ಮಾಡಲು ಗೃಹಮಂತ್ರಿಗಳು ಸಂಸತ್ತಿನಲ್ಲಿ ಕೊಟ್ಟ ಒಂದು ತರ್ಕವೆಂದರೆ, ಅದು ಭಾರತದೊಂದಿಗೆ ಜಮ್ಮು ಮತ್ತು ಕಾಶ್ಮೀರದ ಸಮಗ್ರೀಕರಣವನ್ನು ತಡೆದಿದೆ ಎಂಬುದು. ನಿಜಸಂಗತಿಯೆಂದರೆ, ಜಮ್ಮು ಮತ್ತು ಕಾಶ್ಮೀರದ ಜನತೆ ನಂತರ ವಿಧಿ 370ರಲ್ಲಿ ಅಡಕಗೊಂಡ ಆಶ್ವಾಸನೆಗಳ ಆಧಾರದಲ್ಲಿ ಭಾರತೀಯ ಒಕ್ಕೂಟವನ್ನು ಸ್ವೇಚ್ಛೆಯಿಂದ ಸೇರಿಕೊಂಡರು. ಕಾಶ್ಮೀರಿ ಜನತೆಗೆ ತಮ್ಮ ಭವಿಷ್ಯ ಭಾರತದೊಂದಿಗೆ ಬೆಸೆದುಕೊಂಡಿದೆ ಎಂಬ ಆಶ್ವಾಸನೆಯನ್ನು ಕೊಟ್ಟದ್ದು ಈ ಸಂವಿಧಾನಿಕ ರಕ್ಷಣೆಯೇ. ಆದರೆ ಈ ವಿಧಿ 370 ಆರಂಭದಿಂದಲೇ ಒಂದಾದ ಮೇಲೊಂದರಂತೆ ಕೇಂದ್ರ ಸರಕಾರಗಳಿಂದ ದಾಳಿಗಳಿಗೆ ಒಳಗಾಯಿತು.

1953ರಿಂದ, ಕೇಂದ್ರ ಸರಕಾರ 370ನೇ ವಿಧಿಯಲ್ಲಿ ಒದಗಿಸಿದ್ದ ಸ್ವಾಯತ್ತತೆಯನ್ನು ಸವೆಸುವಂತಹ ಕ್ರಮಗಳನ್ನು ಕೈಗೊಳ್ಳಲಾರಂಭಿಸಿತು. ಕೇಂದ್ರೀಕರಣ ಮತ್ತು ಸ್ವಾಯತ್ತತೆಯ ನಿರಾಕರಣೆಯ ಪ್ರಕ್ರಿಯೆ ಅರವತ್ತರ, ಎಪ್ಪತ್ತರ ಮತ್ತು ಎಂಬತ್ತರ ದಶಕದಾದ್ಯಂತ ಮುಂದುವರೆಯಿತು. ರಾಜ್ಯಕ್ಕೆ ನೀಡಿದ ಸ್ವಾಯತ್ತತೆಯ ಹೆಚ್ಚಿನ ಅಂಶಗಳನ್ನು ಇಲ್ಲದಂತೆ ಮಾಡಲು 370ನೇ ವಿಧಿಯನ್ನು ಬುಡಮೇಲು ಮಾಡಲಾಯಿತು. 1954ರ "ಸಂವಿಧಾನ (ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯ) ಆದೇಶ"ದಿಂದ ಆರಂಭಿಸಿ 2010ರ ವರೆಗೆ ಇಂತಹ 42 ಆದೇಶಗಳನ್ನು ಹೊರಡಿಸಲಾಯಿತು. ಇವು ಕೇಂದ್ರೀಯ ಹಸ್ತಕ್ಷೇಪ ಮತ್ತು ಕಾನೂನುಗಳ ವ್ಯಾಪ್ತಿಯನ್ನು ವಿಸ್ತರಿಸಿದವು. ವಿಧಿ 370ನ್ನು ಅಂಗೀಕರಿಸಿದಾಗ ಕಂಡರಿಸಿರದ ಸಂಗತಿಗಳಿವು.

ಸ್ವಾಯತ್ತತೆಯ ಸವೆತ, ಪ್ರಜಾಪ್ರಭುತ್ವದ ನಿರಾಕರಣೆ, ಪ್ರಜಾಪ್ರಭುತ್ವ ಹಕ್ಕುಗಳ ದಮನ, ಚುನಾಯಿತ ಸರಕಾರಗಳನ್ನು ಉರುಳಿಸಿದ್ದು, ಚುನಾವಣೆಗಳಲ್ಲಿ ಮೋಸಗಳು, ಇವುಗಳ ಜೊತೆಗೆ ರಾಜ್ಯದ, ಅದರಲ್ಲೂ ಕಣಿವೆಯ ಜನಗಳು ದಮನದ ಅತ್ಯಂತ ಪಾಶವೀ ಸ್ವರೂಪಗಳನ್ನು ಎದುರಿಸಬೇಕಾಯಿತು.

ಪೆಲೆಟ್ ಗನ್ ಪೀಡಿತರು



ಈ ಕೇಂದ್ರೀಕರಣ ಪ್ರಕ್ರಿಯೆಯ ಮೂಲಕ ವಿಧಿ 370ರ ನಿಜವಾದ ತಿರುಳನ್ನು ಬರಿದುಗೊಳಿಸಲಾಯಿತು. ಕೇಂದ್ರೀಯ ಪಟ್ಟಿಯಲ್ಲಿರುವ 97 ಶಾಸನದ ವಿಷಯಗಳಲ್ಲಿ 94ನ್ನು ಮತ್ತು ಸಮವರ್ತಿ ಪಟ್ಟಿಯಲ್ಲಿನ 47 ರಲ್ಲಿ 26ನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ವಿಸ್ತರಿಸಲಾಗಿದೆ.

ಸ್ವಾಯತ್ತತೆಯ ಇಂತಹ ಸವೆತದೊಂದಿಗೆ ಪ್ರಜಾಪ್ರಭುತ್ವದ ನಿರಾಕರಣೆ ಮತ್ತು ರಾಜ್ಯದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳ ದಮನ ನಡೆದಿದೆ. ಚುನಾಯಿತ ಸರಕಾರಗಳನ್ನು ಉರುಳಿಸಲಾಯಿತು ಮತ್ತು ಚುನಾವಣೆಗಳಲ್ಲಿ ಮೋಸಗಳು ಯಾವುದೇ ನಾಚಿಕೆಯಿಲ್ಲದೆ ನಡೆದವು. ರಾಜ್ಯದ, ಅದರಲ್ಲೂ ಕಣಿವೆಯ ಜನಗಳು ದಮನದ ಅತ್ಯಂತ ಪಾಶವೀ ಸ್ವರೂಪಗಳನ್ನು ಎದುರಿಸಬೇಕಾಯಿತು–ಗೋಳೀಬಾರುಗಳು, ಬಂಧನಗಳು, ಹತ್ತಾರು ಯುವಜನಗಳನ್ನು ಕುರುಡರಾಗಿಸಿದ ಪೆಲೆಟ್ ಗಾಯಗಳು ಇತ್ಯಾದಿ. ಈ ರಾಜ್ಯದಲ್ಲಿ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಸಶಸ್ತ್ರ ತುಕಡಿಗಳನ್ನು ಮತ್ತು ಅರೆ ಮಿಲಿಟರಿ ಪಡೆಗಳನ್ನು ತಂದಿಡಲಾಗಿದೆ. ಕರಾಳ "ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ" (Armed Forces Special Powers Act -AFSPA) ಯನ್ನು ಈಗಲೂ ಎಲ್ಲ ನಾಗರಿಕ ಪ್ರದೇಶಗಳಲ್ಲೂ ಅನ್ವಯಗೊಳಿಸಲಾಗುತ್ತಿದೆ. ಇವನ್ನು ನಾಗರಿಕ ಪ್ರದೇಶಗಳಿಂದ ತೆಗೆಯಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತ ಬಂದಿದೆ.

ಈ ನಾಚಿಕೆಗೆಟ್ಟ ಅನ್ಯಾಯದ ಕ್ರಮಗಳೇ ಜಮ್ಮು ಮತ್ತು ಕಾಶ್ಮೀರದ ಜನಗಳು ಹೆಚ್ಚೆಚ್ಚಾಗಿ ಭಾರತದಿಂದ ದೂರ ಸರಿಯುವ ಪರಕೀಯ ಭಾವಕ್ಕೆ ಒಳಗಾಗುವಂತೆ ಮಾಡಿವೆ.

ಸಮಗ್ರೀಕರಣ ಎಂದೂ ಬಲವಂತ ಮತ್ತು ದಮನದಿಂದ ಸಾಧ್ಯವಾಗದು. ಅದು ರಾಜಕೀಯ ಸಂವಾದದಿಂದ ಮಾತ್ರವೇ ಸಾಧ್ಯ. ಆದರೆ, ಮತ್ತೆ-ಮತ್ತೆ ಆಶ್ವಾಸನೆ ನೀಡಿದರೂ ಕೇಂದ್ರ ಸರಕಾರ ಕಾಶ್ಮೀರದ ಜನತೆ ಮತ್ತು ಅವರ ಪ್ರತಿನಿಧಿಗಳೊಂದಿಗೆ ರಾಜಕೀಯ ಸಂವಾದವನ್ನು ನಡೆಸಲು ನಿರಾಕರಿಸಿದೆ.

ಕೇಂದ್ರ ಸರಕಾರ ತನಗಷ್ಟೇ ಬೇಕಾದ್ದನ್ನು ಆರಿಸಿಕೊಳ್ಳುವ ಧೋರಣೆಯನ್ನು ಅನುಸರಿಸುವಂತೆ ಕಾಣುತ್ತದೆ. ಒಂದೆಡೆಯಲ್ಲಿ, ಅದು ನಾಗಾ ಪ್ರತ್ಯೇಕತಾವಾದಿಗಳ ಪ್ರತಿನಿಧಿಗಳೊಂದಿಗೆ, ಅದು ಕೂಡ ವಿದೇಶಿ ನೆಲದಲ್ಲಿ ಮಾತುಕತೆಗಳನ್ನು ಆರಂಭಿಸುತ್ತದೆ, ಆದರೆ ಕಾಶ್ಮೀರದಲ್ಲಿ ಎಲ್ಲ ವಿಭಾಗಗಳೊಂದಿಗೆ ಮಾತಾಡಲು ನಿರಾಕರಿಸುತ್ತದೆ. ಮೋದಿ ಸರಕಾರದ ಈ ರಾಜಕೀಯ ಮುತುವರ್ಜಿಯ ಅಭಾವವೇ ರಾಜ್ಯದಲ್ಲಿ ಪರಿಸ್ಥಿತಿ ಹದಗೆಡುವಂತೆ ಮಾಡಿರುವುದು.

ಆದರೂ, ಸಂವಿಧಾನದ 370ನೇ ವಿಧಿ, ಅದನ್ನೆಷ್ಟೇ ದುರ್ಬಲಗೊಳಿಸಿದರೂ, ಈಗಲೂ ಕಾಶ್ಮೀರದ ಸ್ವಾಯತ್ತತೆಯ, ಮತ್ತು ಕಾಶ್ಮೀರದ ಹಕ್ಕುಗಳ ಮರುಸ್ಥಾಪನೆಯ ರಾಜಕೀಯ ಸಾಧ್ಯತೆಯ ಒಂದು ಕುರುಹು ಆಗಿ ಉಳಿದಿತ್ತು. ಇದನ್ನೀಗ ಮೋದಿ ಸರಕಾರ ನಂದಿಸಿ ಬಿಟ್ಟಿದೆ.

## • ಭಯೋತ್ಪಾದನೆಗೆ ಮತ್ತು ಕಾಶ್ಮೀರಿ ಪಂಡಿತ ಸಮುದಾಯದ ಸಂಕಟಗಳಿಗೆ ವಿಧಿ 370 ಕಾರಣವೇ?




ಸಂವಿಧಾನದ ವಿಧಿ 370 ಕಾಶ್ಮೀರದಲ್ಲಿ ಪ್ರತ್ಯೇಕತಾವಾದ ಮತ್ತು ಭಯೋತ್ಪಾದನೆಯನ್ನು ಹುಟ್ಟು ಹಾಕಿದೆ ಎಂದು ಬಿಜೆಪಿ ಹೇಳಿಕೊಳ್ಳುತ್ತಿದೆ. ಇದು ಸಂಪೂರ್ಣವಾಗಿ ಸ್ವಹಿತಸಾಧಕ, ಸ್ವಾರ್ಥಪರ ತರ್ಕ, ನೋಟುರದ್ಧತಿಯ ಸಮರ್ಥನೆಗೆ ಕೊಟ್ಟಂತದ್ದು. ಪ್ರಧಾನ ಮಂತ್ರಿಗಳು ನೋಟುರದ್ಧತಿ ಭಯೋತ್ಪಾದನೆಯನ್ನು ನಿಲ್ಲಿಸುತ್ತದೆ ಎಂದಿದ್ದರು ಎಂಬುದನ್ನು ನೆನಪಿಸಿಕೊಳ್ಳಿ. ಅದು ಶುದ್ಧ ಮೋಸ ಎಂಬುದು ಸಾಬೀತಾಗಿದೆ. ಬೇರೆ ರಾಜ್ಯಗಳೂ ದೀರ್ಘಕಾಲದ ಭಯೋತ್ಪಾದನಾ ಅವಧಿಗಳನ್ನು ಕಂಡಿವೆ. ಖಾಲಿಸ್ತಾನಿಗಳು ಪಂಜಾಬಿನಲ್ಲಿ ಭಯೋತ್ಪಾದಕ ಕೃತ್ಯಗಳ ಮೂಲಕ ಅಲ್ಲೋಲ-ಕಲ್ಲೋಲ ಎಬ್ಬಿಸಿದ್ದಾಗ ಅಲ್ಲಿ 370 ಇರಲಿಲ್ಲ. ಈಶಾನ್ಯ ಭಾಗದಲ್ಲಿ ಭಯೋತ್ಪಾದಕ ಕೃತ್ಯಗಳ ಮೂಲಕ ವಿಧ್ವಂಸ ನಡೆಯುತ್ತಿದ್ದಾಗ ಅಲ್ಲಿ 370 ಇರಲಿಲ್ಲ. ಅಲ್ಲಿ ಇದ್ದದ್ದು ಭಯೋತ್ಪಾದಕ ಗುಂಪುಗಳು ಮತ್ತು ಕೃತ್ಯಗಳಿಗೆ ಆಧಾರವನ್ನು ನಿರ್ಮಿಸುವ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳು.

ನಿಜ ಸಂಗತಿ ಎಂದರೆ, 370ನೇ ವಿಧಿಯ ಅಡಿಯಲ್ಲಿದ್ದ ಸ್ವಾಯತ್ತತೆಯನ್ನು ಸವೆಸಿರುವುದು ಮತ್ತು ಪ್ರಜಾಪ್ರಭುತ್ವದ ಪಾಶವೀ ದಮನ ಇವೇ ಅಸಂತೃಪ್ತಿ ಮತ್ತು ಪರಕೀಯ ಭಾವದ ಕಿಡಿಗಳನ್ನು ಹೊತ್ತಿಸಿದ್ದು. ಇದು ಪ್ರತ್ಯೇಕತಾವಾದ ತಲೆ ಎತ್ತಲು ಮತ್ತು ಭಯೋತ್ಪಾದನೆ ಬೆಳೆಯಲು ದಾರಿ ಮಾಡಿಕೊಟ್ಟಿತು. ಇದಕ್ಕೆ ಪಾಕಿಸ್ತಾನ ಮತ್ತು ಪಾಕಿಸ್ತಾನದಲ್ಲಿ ನೆಲೆಯಿರುವ ಇಸ್ಲಾಮೀವಾದಿ ಶಕ್ತಿಗಳು, ಹಿಜ್ಬುಲ್ ಮುಜಾಹಿದಿನ್ ಮುಂತಾದವುಗಳು, ಮತ್ತು ತದನಂತರ ಪಾಕಿಸ್ತಾನದಲ್ಲಿ ನೆಲೆಯಿರುವ ಜೈಶ್-ಎ-ಮೊಹಮ್ಮದ್ ಮತ್ತು ಲಷ್ಕರ್-ಎ-ತೈಬಾದಂತಹ ಉಗ್ರ ಭಯೋತ್ಪಾದಕ ಗುಂಪುಗಳು ನೆರವು ಮತ್ತು ಕುಮ್ಮಕ್ಕು ನೀಡಿದವು.

ಈ ಕಾಲಾವಧಿಯಲ್ಲಿ ಕಣಿವೆಯಲ್ಲಿ ಮೂಲಭೂತವಾದಿ ಶಕ್ತಿಗಳ ಬೆಳವಣಿಗೆ ಅತ್ಯಂತ ವಿನಾಶಕಾರೀ ಪರಿಣಾಮಗಳನ್ನು ಉಂಟುಮಾಡಿತು. ಕಶ್ಮೀರಿಯತ್‌ನ ಜಾತ್ಯತೀತ ನೆಲೆ ಸವೆದು ಹೋಗುತ್ತಿದ್ದು, ಈಗ ಉಗ್ರ ಇಸ್ಲಾಮ್‌ವಾದೀ ಶಕ್ತಿಗಳು ಅದನ್ನು ದಬಾಯಿಸಿಟ್ಟಿವೆ.

ಇದಕ್ಕೆ ಪಾಕಿಸ್ತಾನದ ಪೂರ್ಣ ಬೆಂಬಲವಿದೆ. ಇದರ ಮೊದಲ ಉದಾಹರಣೆಯೆಂದರೆ, ತೊಂಭತ್ತರ ದಶಕದ ಆರಂಭದಲ್ಲಿ ಇಲ್ಲಿನ ಮುಸ್ಲಿಂ ಸಮುದಾಯದವರೊಂದಿಗೆ ಸದಾ ಶಾಂತಿ ಮತ್ತು ಸಾಮರಸ್ಯದಿಂದ ಬದುಕಿದ್ದ ಕಾಶ್ಮೀರಿ ಪಂಡಿತರು ಎಂಬ ಸಮುದಾಯದವರ ಮೇಲೆ ಭಯಾನಕವಾಗಿ ಗುರಿಯಿಟ್ಟದ್ದು, ಅವರ ದಬಾವಣೆ ಮತ್ತು ಅವರ ವಿರುದ್ದ ಹಿಂಸಾಚಾರ. ಇದು ನಡೆದದ್ದು ರಾಷ್ಟ್ರತಿ ಆಳ್ವಿಕೆಯ ಅಡಿಯಲ್ಲಿ ಜಗಮೋಹನ್ ರಾಜ್ಯಪಾಲರಾಗಿದ್ದಾಗ. ಕೇಂದ್ರ ಸರಕಾರ ಮತ್ತು ಅದರ ರಾಜ್ಯಪಾಲ ಕಾಶ್ಮೀರಿ ಪಂಡಿತರಿಗೆ ರಕ್ಷಣೆ ಕೊಡುವಲ್ಲಿ ಸಂಪೂರ್ಣವಾಗಿ ವಿಫಲರಾದರು. ನಿಜ ಹೇಳಬೇಕೆಂದರೆ, ಜಗಮೋಹನ್ ಅಡಿಯಲ್ಲಿ ಕಾನೂನು–ವ್ಯವಸ್ಥೆ ಕುಸಿದು ಬಿದ್ದಿತ್ತು. ನಂತರ, ಕಾಶ್ಮೀರಿ ಪಂಡಿತರನ್ನು ರಕ್ಷಿಸುವಲ್ಲಿ ಸಂಪೂರ್ಣ ವಿಫಲಗೊಂಡ ಅದೇ ಜಗಮೋಹನ್ ಬಿಜೆಪಿ ಸೇರಿದರು ಮತ್ತು ಅವರಿಗೆ ಕೇಂದ್ರ ಮಂತ್ರಿಯಾಗಿ ಬಡ್ತಿಯೂ ಸಿಕ್ಕಿತು.

ಅದು ಈ ರಾಜ್ಯದ ಇತಿಹಾಸದಲ್ಲಿ ಒಂದು ನಾಚಿಕೆಗೇಡಿನ ಅಧ್ಯಾಯ. ಈಗಲೂ ಕೂಡ ದೊಡ್ಡ ಸಂಖ್ಯೆಯಲ್ಲಿ ಬಹುಪಾಲು ಕಾಶ್ಮೀರಿ ಪಂಡಿತರು ತಮ್ಮದೇ ದೇಶದಲ್ಲಿ ನಿರಾಶ್ರಿತರಾಗಿ ಬದುಕುತ್ತಿದ್ದಾರೆ. ಅವರು ಚಾರಿತ್ರಿಕವಾಗಿ ಕಣಿವೆಯಲ್ಲಿ ಅನುಭವಿಸಿದ್ದ ಶಾಂತಿ ಮತ್ತು ಸಾಮರಸ್ಯದೊಂದಿಗೆ ಬದುಕಲು ತಮ್ಮ ಮನೆಗಳಿಗೆ ಹಿಂದಿರುಗುವಂತಾಗುವುದು ಅವರ ಒಂದು ಮೂಲಭೂತ ಹಕ್ಕು. ಇದನ್ನು ಜಾತ್ಯತೀತ ಶಕ್ತಿಗಳನ್ನು ಮತ್ತು ಕೋಮು ಸೌಹಾರ್ದವನ್ನು ಬಲಪಡಿಸುವ ಮೂಲಕ ಮಾತ್ರವೇ ಖಾತ್ರಿಗೊಳಿಸಲು ಸಾಧ್ಯವೇ ಹೊರತು, ಒಂದೆಡೆಯಲ್ಲಿ ಇಸ್ಲಾಮೀವಾದಿಗಳು ಮತ್ತೊಂದೆಡೆಯಲ್ಲಿ ಕೋಮುವಾದಿ ಸಂಘ ಪರಿವಾರದ ಶಕ್ತಿಗಳು ನಡೆಸುತ್ತಿರುವ ದ್ವೇಷ ರಾಜಕಾರಣದಿಂದ ಇದು ಸಾಧ್ಯವಿಲ್ಲ.

ಕಳೆದ ಐದು ವರ್ಷಗಳಲ್ಲಿ ಮೋದಿ ಆಳ್ವಿಕೆಯ ಅಡಿಯಲ್ಲಿ ಭಯೋತ್ಪಾದನೆಯ ಘಟನೆಗಳು ಹೆಚ್ಚಿರುವುದರ ಅತ್ಯಂತ ಅಪಾಯಕಾರೀ ಅಂಶವೆಂದರೆ, ಉಗ್ರರ ಪಟ್ಟಿಗೆ ಸೇರುತ್ತಿರುವ ಸ್ಥಳೀಯರ ಸಂಖ್ಯೆಯಲ್ಲಿ ಆಗುತ್ತಿರುವ ಹೆಚ್ಚಳ. ಇದಕ್ಕೂ 370ನೇ ವಿಧಿಗೂ ಏನೇನೂ ಸಂಬಂಧವಿಲ್ಲ. ಮೋದಿ ಸರಕಾರ ಸತತವಾಗಿ ಯಾವುದೇ ರಾಜಕೀಯ ಮುಂದಡಿಯ ಕ್ರಮಗಳನ್ನು ಕೈಗೊಳ್ಳದೇ ಇರುವುದು ಯುವಜನರ ಹತಾಶೆ ಮತ್ತು ಪರಕೀಯ ಭಾವದ ಬೆಂಕಿಗೆ ಮತ್ತಷ್ಟು ತಿದಿಯೂದಿದೆ.

ಇದರ ದುಷ್ಪರಿಣಾಮಗಳು ಕಾಶ್ಮೀರಕ್ಕಷ್ಟೇ ಅಲ್ಲ, ಭಾರತದ ಇತರ ಭಾಗಗಳಿಗೂ ಅತ್ಯಂತ ಘೋರವಾಗಿವೆ. ಏಕೆಂದರೆ, ಎಷ್ಟು ದಿನ ತಾನೇ ಜನಗಳ ದನಿಗಳನ್ನು ದಬಾಯಿಸಿಡಲು ಸಾಧ್ಯ? ಎಷ್ಟು ಸಮಯದ ವರೆಗೆ ಕಾಶ್ಮೀರಕ್ಕೆ ಹೆಚ್ಚುವರಿ ಭದ್ರತಾ ಪಡೆಗಳನ್ನು ಕಳಿಸಿ ಎಲ್ಲ ಸಾಮಾನ್ಯ ಚಟುವಟಿಕೆಗಳನ್ನು ಮತ್ತು ಪರಸ್ಪರ ಕ್ರಿಯೆಗಳನ್ನು ತಡೆಯುತ್ತಲೇ ಇರಲು ಸಾಧ್ಯ? ಇದೊಂದು ನಿವಾರಣೋಪಾಯ ಖಂಡಿತಾ ಅಲ್ಲ.

# • ವಿಧಿ 370 ಕಾಶ್ಮೀರದ ಅಭಿವೃದ್ಧಿಯನ್ನು ತಡೆದಿದೆಯೇ?

ಜಮ್ಮು ಮತ್ತು ಕಾಶ್ಮೀರ ಭಾರತದಲ್ಲಿ, ಭೂಮಾಲಕರಿಗೆ ಪರಿಹಾರ ಕೊಡದೆ ವ್ಯಾಪಕವಾದ ಭೂಸುಧಾರಣೆಗಳನ್ನು ಮಾಡಿದ ಮೊದಲ ರಾಜ್ಯವಾಗಿದೆ. ನ್ಯಾಶನಲ್ ಕಾನ್ಫರೆನ್ಸ್ 370ನೇ ವಿಧಿಯನ್ನು ಬಳಸಿಕೊಂಡು ಜಮ್ಮು ಮತ್ತು ಕಾಶ್ಮೀರದಲ್ಲಿ ಆಮೂಲಾಗ್ರ ಭೂಸುಧಾರಣೆಗಳನ್ನು ನಡೆಸುವ ಮತ್ತು ರೈತಾಪಿ ಜನಗಳಿಗೆ ಸಾಲ ಪರಿಹಾರವನ್ನು ಕೊಡುವ ಕಾಯ್ದೆಗಳನ್ನು ಪಾಸು ಮಾಡಿದ್ದರಿಂದ ಇದು ಸಾಧ್ಯವಾಯಿತು. ಇದರಿಂದಾಗಿಯೇ ಜಮ್ಮು ಮತ್ತು ಕಾಶ್ಮೀರದ ಸಾಮಾಜಿಕ–ಆರ್ಥಿಕ ಸೂಚಕಗಳು ಹೆಚ್ಚಿನ ವಿಷಯಗಳಲ್ಲಿ ಭಾರತದ ಸರಾಸರಿಗಿಂತ ಉತ್ತಮವಾಗಿವೆ, ಮತ್ತು ಅವನ್ನು ಹೆಚ್ಚು ಅಭಿವೃದ್ಧಿ ಹೊಂದಿರುವ ಕೆಲವು ರಾಜ್ಯಗಳೊಂದಿಗೆ ಕೂಡ ಹೋಲಿಸಬಹುದಾಗಿದೆ. ಇವು ಸಂಸತ್ತಿನಲ್ಲಿ ಅಮಿತ್ ಷಾರ ಹುಸಿ ದಾವೆಗಳಿಗೆ ವ್ಯತಿರಿಕ್ತವಾಗಿವೆ. ಪಿಡಿಪಿ ಸರಕಾರದಲ್ಲಿ ಹಣಕಾಸು ಮಂತ್ರಿಗಳಾಗಿದ್ದ ಹಸೀಬ್ ಡ್ರಾಬೂ ಇತ್ತೀಚಿಗೆ ಬರೆದಿರುವ ಒಂದು ಲೇಖನದಲ್ಲಿ ಈ ಕೆಲವು ಸಾಮಾಜಿಕ–ಆರ್ಥಿಕ ಸೂಚಕಗಳನ್ನು ಕೊಟ್ಟಿದ್ದಾರೆ:

- ಬಡತನದ ರೇಖೆಯ ಕೆಳಗೆ ಇರುವ ಕುಟುಂಬಗಳ ಪ್ರಮಾಣದ ಅಖಿಲ ಭಾರತ ಸರಾಸರಿ 22%, ಆದರೆ ಜಮ್ಮು ಮತ್ತು ಕಾಶ್ಮೀರದಲ್ಲಿ 10% ಕುಟುಂಬಗಳು ಮಾತ್ರ ಬಡತನದ ರೇಖೆಯ ಕೆಳಗೆ ಇವೆ,
- ಇಡೀ ದೇಶದಲ್ಲಿ ಸಾಲಗ್ರಸ್ತತೆ ಅತೀ ಕಡಿಮೆ ಇರುವ ರಾಜ್ಯಗಳಲ್ಲಿ ಈ ರಾಜ್ಯ ಎರಡನೇ ಸ್ಥಾನದಲ್ಲಿದೆ.
- ಜಮ್ಮು ಮತ್ತು ಕಾಶ್ಮೀರದಲ್ಲಿ ಕೃಷಿ ಕೂಲಿಕಾರರ ಪ್ರಮಾಣ ಕೇವಲ 2%, ಆದರೆ ಅಖಿಲ ಭಾರತ ಸರಾಸರಿ 23%.
- ಸರಾಸರಿ ವಯಸ್ಸು ಜಮ್ಮು ಮತ್ತು ಕಾಶ್ಮೀರದಲ್ಲಿ 73 ವರ್ಷ, ರಾಷ್ಟ್ರೀಯ ಮಟ್ಟದಲ್ಲಿ 68 ವರ್ಷ.
- ಹಸುಳೆಗಳ ಸಾವಿನ ದರ ಈ ರಾಜ್ಯದಲ್ಲಿ ಜೀವಂತವಾಗಿ ಹುಟ್ಟುವ ಪ್ರತಿ 1000 ಹಸುಳೆಗಳಲ್ಲಿ 32, ರಾಷ್ಟ್ರೀಯ ಸರಾಸರಿ 40.

ಅದೇ ರೀತಿಯಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಕೈಗಾರಿಕಾ ಬೆಳವಣಿಗೆ ಸಾಧ್ಯವಾಗಲಿಲ್ಲ ಎಂಬ ವಾದವೂ ಒಂದು ಹುಸಿ ವಾದ. ಜಮ್ಮು ಮತ್ತು ಕಾಶ್ಮೀರ ಸರಕಾರ ಇಲ್ಲಿ ಸ್ಥಾಪಿಸ ಬೇಕೆಂದಿರುವ ಯಾವುದೇ ಉದ್ದಿಮೆಗೆ 90ವರ್ಷಗಳ ಭೋಗ್ಯವನ್ನು ಅತಿ ಕಡಿಮೆ ದರಗಳಲ್ಲಿ ಕೊಡುತ್ತದೆ. ನಿಜವಾದ ವಿಚಾರವೆಂದರೆ ಯಾವುದೇ ಗಡಿರಾಜ್ಯಕ್ಕೆ ಕೇಂದ್ರೀಯ ಹೂಡಿಕೆಗಳ ಅಗತ್ಯವಿರುತ್ತದೆ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಇಂತಹ ಪ್ರದೇಶಗಳಲ್ಲಿ ಸ್ಥಾಪಿಸಬೇಕಾಗುತ್ತದೆ. ಈ ಕಣ್ಣೋಟದಿಂದಾಗಿಯೇ ಸಾರ್ವಜನಿಕ

ವಲಯದ ಉದ್ದಿಮೆಗಳನ್ನು ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಸ್ಥಾಪಿಸಲಾಯಿತು. ಆದ್ದರಿಂದಲೇ ಬಿಹೆಚ್‌ಇಎಲ್, ,ಎಸ್‌ಎಐಎಲ್ ಮುಂತಾದವುಗಳ ಸ್ಥಾವರಗಳು ಈ ಹಿಂದೆ ಅಭಿವೃದ್ಧಿ ಹೊಂದಿದ್ದ ಪ್ರದೇಶಗಳಲ್ಲಿ ಇರದೆ ಹರಿದ್ವಾರ, ಬೊಕಾರೊ, ರಾಂಚಿ ಮುಂತಾದೆಡೆಗಳಲ್ಲಿ ಬಂದವು. ಇದರಿಂದಾಗಿಯೇ ಒಂದು ಹೆಚ್‌ಎಂಟಿ ಘಟಕವನ್ನು ಶ್ರೀನಗರದಲ್ಲೂ ಸ್ಥಾಪಿಸಲಾಯಿತು. ಇದನ್ನು 2013ರಲ್ಲಿ ಮುಚ್ಚಲಾಯಿತು. ದುರದೃಷ್ಟವಶಾತ್, ತನ್ನ ಈ 73 ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಕೇವಲ ಇಂತಹ ಮೂರು ಕೇಂದ್ರೀಯ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಕಂಡಿತು. ಇವುಗಳಲ್ಲಿ ಒಟ್ಟು ಹೂಡಿಕೆ ಕೇವಲ 165 ಕೋಟಿ ರೂ.ಗಳು. ಮತ್ತು ಸದ್ಯಕ್ಕೆ ಇಲ್ಲಿ ಉದ್ಯೋಗ ಪಡೆದಿರುವವರ ಸಂಖ್ಯೆ ಕೇವಲ 21 !

ಸಾರ್ವಜನಿಕ ಹೂಡಿಕೆಗಳು ಬರದಿರಲು ಹೆಚ್ಚಿನ ಕಾರಣಗಳು–ಅಲ್ಲಿನ ಪರಕೀಯ ಭಾವ, ಉಗ್ರಗಾಮಿತ್ವದ ಬೆಳವಣಿಗೆ ಮತ್ತು ಆಗಾಗ ಸೆಕ್ಷನ್ 144, ಕರ್ಫ್ಯೂ ಇತ್ಯಾದಿಗಳ ಹೇರಿಕೆ. ನಾವೀಗ ಕಾಣುತ್ತಿರುವ ಅಭೂತಪೂರ್ವ ಬೀಗ ಜಡಿದಿರುವ ಪರಿಸ್ಥಿತಿ ಕಾಶ್ಮೀರದ ಯಾವುದೇ ಕೈಗಾರಿಕೀಕರಣಕ್ಕೆ ಶುಭಲಕ್ಷಣವಲ್ಲ.

ಅಂತಿಮವಾಗಿ, ರಾಜ್ಯದಲ್ಲಿ ವ್ಯಾಪಕವಾಗಿರುವ ಭ್ರಷ್ಟಾಚಾರ ಮತ್ತು ಸಾರ್ವಜನಿಕ ನಿಧಿಗಳ ಲೂಟಿಗೂ 370ನೇ ವಿಧಿಯನ್ನು ದೂಷಿಸಲಾಗುತ್ತಿದೆ. ಭ್ರಷ್ಟಾಚಾರ ಎಂಬುದು ಬೇರೆ ರಾಜ್ಯಗಳಲ್ಲೂ, ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲೂ ವ್ಯಾಪಕವಾಗಿ ಹರಡಿದೆ. ಅದಕ್ಕೂ 370ನೇ ವಿಧಿಗೂ ಏನೂ ಸಂಬಂಧವಿಲ್ಲ. ಜಮ್ಮು ಮತ್ತು ಕಾಶ್ಮೀರ ಭ್ರಷ್ಟಾಚಾರದಿಂದ ಮತ್ತು ಒಂದು ಲಂಚಕೋರ ಆಡಳಿತದಿಂದ ನರಳುತ್ತಿದೆ ಎಂಬುದು ನಿಜ. ಆದರೆ ವಾಸ್ತವ ಸಂಗತಿಯೆಂದರೆ, ಇಂತಹ ಅವಸ್ಥೆ ಜವಾಬುದಾರಿಕೆ ಮತ್ತು ಪ್ರಜಾಪ್ರಭುತ್ವ ಪ್ರಕ್ರಿಯೆಯ ಅಭಾವದಿಂದಾಗಿ ಉಂಟಾಗಿದೆ. ಜಮ್ಮು ಮತ್ತು ಕಾಶ್ಮೀರ ಹೆಚ್ಚು–ಕಮ್ಮಿ ಒಂದು ಪೋಲೀಸ್ ಪ್ರಭುತ್ವವೇ ಆಗಿದೆ, ದೀರ್ಘ ಕಾಲಾವಧಿಗಳ (ಒಟ್ಟಾಗಿ ಸುಮಾರು 10 ವರ್ಷಗಳ ಕಾಲ) ವರೆಗೆ ಕೇಂದ್ರೀಯ ಆಳ್ವಿಕೆಗಳಿಗೆ ಒಳಗಾಗಿದೆ. ಕೇಂದ್ರೀಕೃತ ಅಧಿಕಾರಶಾಹಿ–ಭದ್ರತಾ ಯಂತ್ರ ಮತ್ತು ಯಾರಿಗೂ ಉತ್ತರದಾಯಿಗಳಲ್ಲದ ಅದರ ರಾಜಕೀಯ ಶಾಮೀಲುದಾರರು ರಾಜ್ಯದಲ್ಲಿ ಭ್ರಷ್ಟಾಚಾರದ ಪ್ರಧಾನ ಮೂಲ.



# ಉಪಸಂಹಾರ

ನಾವಿಲ್ಲಿ ನೋಡಿರುವ ಹಾಗೆ, ಆರಂಭದಿಂದಲೇ ಹಿಂದುತ್ವ ಕೋಮುವಾದಿ ಶಕ್ತಿಗಳು ಪಾಳೆಯಗಾರೀ ಆಳ್ವಿಕೆಯ ವಿರುದ್ಧ ನ್ಯಾಶನಲ್ ಕಾನ್ಫರೆನ್ಸ್ ಪಕ್ಷದ ನೇತೃತ್ವದ ಆಂದೋಲನಕ್ಕೆ ವಿರುದ್ಧವಾಗಿದ್ದವು. ಜನಸಂಘದ ಪೂರ್ವಜ ಸಂಘಟನೆಯಾಗಿದ್ದ ಪ್ರಜಾಪರಿಷದ್, ಅಲ್ಲಿಯ ಮಹಾರಾಜ ಜಮ್ಮು ಮತ್ತು ಕಾಶ್ಮೀರ ಸ್ವತಂತ್ರ ದೇಶವಾಗಿರ ಬೇಕೆಂದು ಬಯಸುತ್ತಿದ್ದಾಗ ಅವರನ್ನು ಬೆಂಬಲಿಸಿತು. ಜಮ್ಮು ಮತ್ತು ಕಾಶ್ಮೀರ ಭಾರತ ಒಕ್ಕೂಟಕ್ಕೆ ಸೇರ್ಪಡೆಯಾದ ನಂತರ, ಜನಸಂಘ ಮತ್ತು ಹಿಂದೂ ಮಹಾಸಭಾ ಜಮ್ಮು ಮತ್ತು ಕಾಶ್ಮೀರಕ್ಕೆ ಯಾವುದೇ ಸ್ವಾಯತ್ತತೆಗೆ ಸಂಪೂರ್ಣವಾಗಿ ವಿರುದ್ಧವಾಗಿದ್ದವು. ಆರೆಸ್ಸೆಸ್ ಬೆಂಬಲಿತ ಜನಸಂಘ ಮತ್ತು ನಂತರ ಬಿಜೆಪಿಯ ಸಿದ್ಧಾಂತ ಭಾರತವನ್ನು ಕುರಿತಂತೆ ಒಂದು ಬಹುಸಂಖ್ಯಾಕವಾದಿ, ಕೇಂದ್ರೀಕೃತ ಕಣ್ಣೋಟವನ್ನು ಆಧರಿಸಿದೆ. ಆದ್ದರಿಂದಲೇ ಯಾವುದೇ ರಾಜ್ಯಕ್ಕೆ ಸ್ವಾಯತ್ತತೆಗೆ ಅವು ವಿರುದ್ಧವಾಗಿವೆ. ಅವರ ವೈಷಮ್ಯಕ್ಕೆ ಕಾಶ್ಮೀರ ಕಣಿವೆ ಒಂದು ಮುಸ್ಲಿಂ–ಬಹುಸಂಖ್ಯಾತ ಪ್ರದೇಶ ಎಂಬ ಸಂಗತಿಯೂ ಕಾರಣವೆಂಬುದು ಕೂಡ ಒಂದು ಸತ್ಯ ಸಂಗತಿ.

ಕಾಶ್ಮೀರ ಒಂದು ಪ್ರತ್ಯೇಕತಾವಾದ ಮತ್ತು ಭಯೋತ್ಪಾದನೆಯ ತಿಪ್ಪೆಗುಂಡಿಯಾಗಲು ಅದರ ಧಾರ್ಮಿಕ ಸಂಯೋಜನೆಯೇ ಕಾರಣ ಎಂಬುದು ಆರೆಸ್ಸೆಸ್–ಬಿಜೆಪಿ ಕಥನ. ಅವರಲ್ಲಿ ಹುದುಗಿರುವ ಮುಸ್ಲಿಂ–ವಿರೋಧಿ ಪಕ್ಷಪಾತ ಅವರು ಕಾಶ್ಮೀರಿ ಜನತೆಯ ಯಾವುದೇ ಪ್ರಜಾಪ್ರಭುತ್ವ ಆಕಾಂಕ್ಷೆಗಳ ಬಗ್ಗೆ ವೈಷನ್ಯವನ್ನು ಹೊಂದುವಂತೆ ಮಾಡುತ್ತದೆ. ಅವರು 370ನೇ ವಿಧಿಯನ್ನು ರದ್ದು ಮಾಡಬೇಕು ಎಂದು ಪ್ರತಿಪಾದಿಸುವುದರ ನಿಜವಾದ ಆರ್ಥ, ಕಣಿವೆಯ ಜನಗಳನ್ನು ಒಂದು ಭದ್ರತಾ–ಪ್ರಭುತ್ವ ಯಂತ್ರದ ಅಡಿಯಲ್ಲಿ ದಮನ ಮಾಡಬೇಕು ಎಂಬುದೇ ಆಗಿದೆ.

ಆರೆಸ್ಸೆಸ್ ಮತ್ತು ಮೋದಿ–ಷಾ ಜೋಡಿಗೆ ಕಾಶ್ಮೀರ ಅಖಂಡ ಭಾರತಕ್ಕೆ ಸೇರಿದ ಒಂದು ಭೂಮಿಯ ತುಣುಕು ಮಾತ್ರ, ಅಲ್ಲಿಯ ಜನಗಳು ಮುಸ್ಲಿಮರಾಗಿರುವುದರಿಂದ ಅವರನ್ನು ಪರಕೀಯರೆಂದು ಕಾಣಬೇಕು, ಅವರಿಗೆ ಕಾಶ್ಮೀರ ಬೇಕು, ಕಾಶ್ಮೀರಿಗಳಲ್ಲ: ಅವರ ರಾಷ್ಟ್ರವಾದ ಅಲ್ಲಿಯ ಭೂಮಿಯದ್ದು, ಅಲ್ಲಿಯ ಜನಗಳದ್ದಲ್ಲ. ಅವರ ಮಟ್ಟಿಗೆ. ಒಂದು ರಾಷ್ಟ್ರ ಎನಿಸುವುದು ಜನಗಳಲ್ಲ, ಬದಲಿಗೆ ಅದರ ಗಡಿಗಳು ಮತ್ತು ಅಲ್ಲಿಯ ಭೂಮಿ ಮಾತ್ರ.

ಆರೆಸ್ಸೆಸ್ ಮತ್ತು ಬಿಜೆಪಿ ಜಮ್ಮು ಮತ್ತು ಕಣಿವೆಯ ನಡುವೆ ಕೋಮುವಾದಿ ವಿಭಜನೆಯನ್ನು ಉಲ್ಬಣಗೊಳಿಸಲು ಬಹು ತತ್ಪರತೆಯಿಂದ ಕೆಲಸ ಮಾಡಿ ಕೊಂಡು ಬಂದಿವೆ. 2014ರಲ್ಲಿ ಕೇಂದ್ರದಲ್ಲಿ ಮೋದಿ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಈ ಪ್ರಯತ್ನಗಳ ಮಟ್ಟವನ್ನು, ಪ್ರಮಾಣವನ್ನು ಗಮನಾರ್ಹವಾಗಿ ಹೆಚ್ಚಿಸಲಾಯಿತು. ನಾಗರಿಕ ಪ್ರತಿಭಟನೆಗಳನ್ನು ಚಚ್ಚಿ ಹಾಕುವ, ಅವನ್ನು ಉಗ್ರಗಾಮಿತನದಂತೆ ಕಾಣುವ, ಮತ್ತು ಎಲ್ಲ ರಾಜಕೀಯ ಸಂವಾದವನ್ನು ಕೈಬಿಡುವ ಬಿಗಿಧೋರಣೆ ರಾಜ್ಯದಲ್ಲಿ ಪರಿಸ್ಥಿತಿಗಳನ್ನು

ಉಲ್ಬಣಗೊಳಿಸಿತು. ಕಳೆದ ಕೆಲವು ವರ್ಷಗಳಲ್ಲಿ, ಉಗ್ರ ಚಟುವಟಿಕೆಗಳಲ್ಲಿ ಹೆಚ್ಚೆಚ್ಚು ಸಂಖ್ಯೆಯಲ್ಲಿ ಸೇರಿರುವುರು ಸ್ಥಳೀಯ ಯುವಜನಗಳೇ. ಕೊಲ್ಲಲ್ಪಟ್ಟ ಭದ್ರತಾಪಡೆಗಳವರು ಮತ್ತು ಉಗ್ರರ ಸಂಖ್ಯೆಗಳು ನಿರಂತರವಾಗಿ ಏರಿಕೊಂಡು ಬಂದಿರುವುದು ಕಾಣುತ್ತದೆ.

ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯ ಅಡಿಯಲ್ಲಿ ವಿಶೇಷ ಸ್ಥಾನಮಾನದ ರದ್ಧತಿ ಮತ್ತು ಆ ರಾಜ್ಯವನ್ನು ಒಡೆದಿರುವುದು ಎಲ್ಲಕ್ಕಿಂತ ಹೆಚ್ಚಾಗಿ ಕಾಶ್ಮೀರದ ಜನತೆಯ ಇಚ್ಛಾಶಕ್ತಿಯನ್ನು ಮುರಿಯುವುದಕ್ಕಾಗಿ ಮತ್ತು ಕಾಶ್ಮೀರದ ಜನಸಂಖ್ಯಾ ಸಂಯೋಜನೆಯನ್ನು ಬದಲಿಸುವುದಕ್ಕಾಗಿಯೇ. ಇದೀಗ ಕಾಶ್ಮೀರದಲ್ಲಿ ಮೋದಿ–ಷಾ ಜೋಡಿಯ ಕ್ರಮಗಳ ನಿಜವಾದ ಆಶಯ.

ಅಲ್ಲದೆ, ಮೋದಿ ಆಳ್ವಿಕೆಯ ಅಡಿಯಲ್ಲಿ ಭಾರತದ ಒಕ್ಕೂಟ ಸ್ವರೂಪ ದಾಳಿಗೆ ಒಳಗಾಗಿದೆ. ರಾಜಕೀಯ ಮತ್ತು ಹಣಕಾಸು ವಲಯಗಳಲ್ಲಿ ರಾಜ್ಯಗಳ ಹಕ್ಕುಗಳನ್ನು ಮೊಟಕುಗೊಳಿಸಲಾಗುತ್ತಿದೆ, ಮತ್ತು ಎಲ್ಲ ಅಧಿಕಾರಗಳನ್ನು ಕೇಂದ್ರವೇ ವಹಿಸಿಕೊಳ್ಳುತ್ತಿದೆ. ಜಮ್ಮು ಮತ್ತು ಕಾಶ್ಮೀರದ ಹಕ್ಕುಗಳ ಮೇಲಿನ ದಾಳಿಗಳು ಈ ಕೇಂದ್ರೀಕರಣಗೊಳಿಸುವ ಸರ್ವಾಧಿಕಾರಶಾಹೀ ಪ್ರವೃತ್ತಿಯ ಭಾಗಗಳಾಗಿವೆ.

ಸಿಪಿಐ(ಎಂ) ಇದರ ವಿರುದ್ಧ ಹೋರಾಟಕ್ಕೆ ಬದ್ಧವಾಗಿದೆ ಮತ್ತು ಈ ಕ್ರಮಗಳು ಒಟ್ಟು ಭಾರತದ ಐಕ್ಯತೆ ಮತ್ತು ಹಿತಗಳಿಗೆ ಸಂಪೂರ್ಣವಾಗಿ ವಿರುದ್ದವಾಗಿವೆ ಎಂದು ಒತ್ತಿ ಹೇಳುತ್ತದೆ. ಇದೀಗ ಭಾರತೀಯ ಸಂವಿಧಾನದ ಮೌಲ್ಯಗಳಲ್ಲಿ ನಂಬಿಕೆ ಇರುವ ಎಲ್ಲ ನಾಗರಿಕರೂ ಒಟ್ಟುಗೂಡುವ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆ ಮತ್ತು ಅದರ 'ಪೂರ್ಣ ಸ್ವಾಯತ್ತತೆಗಾಗಿ ಅಲ್ಲಿಯ ಜನತೆಯೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಐಕ್ಯತೆಯಿಂದ ನಿಲ್ಲಬೇಕಾದ ಸಮಯವಾಗಿದೆ.

**ಆಧಾರ ಲೇಖನಗಳು/ದಸ್ತಾವೇಜುಗಳು:**


* ಎ.ಜಿ.ನೂರಾಣಿಯವರ ಲೇಖನ 'ಲಾ ಅಂಡ್ ಪೊಲಿಟಿಕ್ಸ್' , ಫ್ರಂಟ್‌ಲೈನ್, ಸಪ್ಟಂಬರ್ 19, 2000
* ಸಿಪಿಐ(ಎಂ) ಕೇಂದ್ರ ಸಮಿತಿಯ ನಿರ್ಣಯ, 2010
* ಹರ್ಕಿಶನ್ ಸಿಂಗ್ ಸುರ್ಜಿತ್ ಅವರ ಲೇಖನ 'ಕಾಶ್ಮೀರ್ ಅಂಡ್ ಇಟ್ಸ್ ಫ್ಯೂಚರ್, 1955
* ಪ್ರಕಾಶ ಕಾರಟ್ ಅವರ ಲೇಖನ "ಅಥಾರಿಟೇರಿಯನ್ ಅಸಾಲ್ಟ್ ಅನ್ ಡೆಮಾಕ್ರಸಿ ಅಂಡ್ ಫ್ರೀಡಂ', ಪೀಪಲ್ಸ್ ಡೆಮಾಕ್ರಸಿ, ಆಗಸ್ಟ್ 5–11, 2019
(ಇದರ ಕನ್ನಡ ಅನುವಾದ 'ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲೆ ಸರ್ವಾಧಿಕಾರಶಾಹಿ ಪ್ರಹಾರ', ಜನಶಕ್ತಿ ವಾರಪತ್ರಿಕೆ, ಸಂಚಿಕೆ 33, ಆಗಸ್ಟ್12–18, 2019)

ಎಷ್ಟು ದಿನ ತಾನೇ ಜನಗಳ ದನಿಗಳನ್ನು ದಬಾಯಿಸಿಡಲು ಸಾಧ್ಯ? ಎಷ್ಟು ಸಮಯದ ವರೆಗೆ ಕಾಶ್ಮೀರಕ್ಕೆ ಹೆಚ್ಚುವರಿ ಭದ್ರತಾ ಪಡೆಗಳನ್ನು ಕಳಿಸಿ ಎಲ್ಲ ಸಾಮಾನ್ಯ ಚಟುವಟಿಕೆಗಳನ್ನು ತಡೆಯುತ್ತಲೇ ಇರಲು ಸಾಧ್ಯ? ಜಮ್ಮು ಮತ್ತು ಕಾಶ್ಮೀರದ ಹಕ್ಕುಗಳ ಮೇಲಿನ ದಾಳಿಗಳು ಕೇಂದ್ರೀಕರಣಗೊಳಿಸುವ ಸರ್ವಾಧಿಕಾರಶಾಹೀ ಪ್ರವೃತ್ತಿಯ ಭಾಗಗಳಾಗಿವೆ, ಒಟ್ಟು ಭಾರತದ ಐಕ್ಯತೆ ಮತ್ತು ಹಿತಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿವೆ. ಇದೀಗ ಭಾರತೀಯ ಸಂವಿಧಾನದ ಮೌಲ್ಯಗಳಲ್ಲಿ ನಂಬಿಕೆ ಇರುವ ಎಲ್ಲ ನಾಗರಿಕರೂ ಒಟ್ಟುಗೂಡುವ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ, ಅದರ ಪೂರ್ಣ ಸ್ವಾಯತ್ತತೆಗಾಗಿ ಅಲ್ಲಿಯ ಜನತೆಯೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಐಕ್ಯತೆಯಿಂದ ನಿಲ್ಲಬೇಕಾದ ಸಮಯವಾಗಿದೆ.




ಪ್ರಕಟಣೆ:

**ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)**

**ಕರ್ನಾಟಕ ರಾಜ್ಯ ಸಮಿತಿ**

ನಂ. 37/ಎ, 8ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಹತ್ತಿರ
ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು- 560086

ಆಗಸ್ಟ್ 2019
ರೂ.10